# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 69 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.09.2024 • ಸೋಮವಾರ • ಪುಟ:04 • ಬೆಲೆ:2
Volume:02 • Issue: 69 • PRGI No:KARKAN/2023/88055 • VIJAYANAGARA • 09.09.2024 • Monday • Page:04 • Rs:2








ಮನಸ್ಸು ಮಾಡು
ಕರ್ತವ್ಯ ನಿಷ್ಠನಾಗು
ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
HAMPI TIMES VIJAYANAGARA
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com



COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089


# ಲಕ್ಷ ಲಕ್ಷ ಹಣ ಕಳೆದುಕೊಂಡು ಕಣ್ಣೀರಿಟ್ಟ ಜನ ಹಣ ಡಬಲಿಂಗ್ ಆರೋಪಿಗಳು ಅಂದರ್

## ಹಣ ದ್ವಿಗುಣ ಹಾವಳಿ ತಡೆಗೆ ಬೇಕಿದೆ ಜಾಗೃತಿ ಅಭಿಯಾನ। ಆರ್ಥಿಕ ಬಲಹೀನರು, ಶಿಕ್ಷಣ ವಂಚಿತರೇ ಟಾರ್ಗೇಟ್

## 35,14,740 ರೂ ನಗದು ವಶ। ಯಾರೂ ಮೋಸ ಹೋಗಬೇಡಿ ಎಂದ ಹಣವಂಚಿತ ಕಲ್ಲಹಳ್ಳಿ ಗ್ರಾಮಸ್ಥರು

■ **ಹಂಪಿ ಟೈಮ್ಸ್ ಹೊಸಪೇಟೆ**

ಹಣ ಡಬಲಿಂಗ್ ಮಾಡೋರ ಬಂದಾರ, ಯಾರಿಗೂ ಹೇಳ್ಬೇಡ, ನಿನ್ನಲ್ಲಿ ಎಷ್ಟಿದೆ ತಂದುಬಿಡು, ಇಲ್ದಿದ್ರೆ ಸಾಲನಾದ್ರೂ ಇಸ್ಕೊಂಡ್ ಬಾ, ಮತ್ತೆ ಕೊಟ್ಟುಬಿಡುವುಂತೆ... ರಾತ್ರೋ ರಾತ್ರೋ ಸಾಹುಕಾರನಾಗಿ ಬಿಡಬಹುದು. ನಿನ್ನೆಲ್ಲಾ ಸಾಲ ತೀರಿಸಿಕೊಂಡು, ಐಶರಾಮಿ ಬದುಕು ನಡೆಸಬಹುದು ಎಂದು ಅಪರಿಚಿತರು ಹೇಳಿದ್ರೆ ನಂಬೋದು ಅಸಾಧ್ಯ. ಪರಿಚಿತ ಆತ್ಮೀಯರಿಂದಲೇ ಇಂತಹ ಮೋಸದ ಜಾಲಕ್ಕೆ ಸಿಲುಕಿದ ಗ್ರಾಮದ ಜನ ಲಕ್ಷಾಂತರ ಹಣ ಕಳೆದುಕೊಂಡು ಕಣ್ಣೀರುಡುತ್ತಿದ್ದಾರೆ.

ಹೌದು., ಹೊಸಪೇಟೆ ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಅನೇಕರಿಗೆ ಹಣ ಡಬಲಿಂಗ್ ಮಾಡಿಕೊಡುತ್ತೇನೆಂದು ಹೇಳಿಕೊಂಡು ಸ್ಥಳೀಯರ ಸಹಕಾರದೊಂದಿಗೆ ಬಂದಿದ್ದ ರಾಜಸ್ಥಾನ/ಚಿತ್ರದುರ್ಗ ಮೂಲದ 25 ವರ್ಷದ ಯುವಕ ಜಿತೇಂದ್ರ ಸಿಂಗ್‌ಗೆ ಹಣ ನೀಡಿ ಅನೇಕರು ವಂಚನೆಗೊಳಗಾಗಿದ್ದಾರೆ. ಕಲ್ಲಹಳ್ಳಿ ಗ್ರಾಮದ ಮುಖಂಡರಾದ ತುಕ್ಯಾನಾಯ್ಕ ಮತ್ತು ಶಂಕು ನಾಯ್ಕ ಎನ್ನುವರ ಮಾತು ನಂಬಿ ತಮ್ಮ ಬಳಿ ಇದ್ದ ಹಣವನ್ನು ನೀಡಿದ್ದಾರೆ. ಆ ಹಣಕ್ಕೆ ಬಟ್ಟೆ ಇನ್ನಿತರ ವಸ್ತುಗಳಿಂದ ಮುಚ್ಚಿ, ಅವರೆದುರೆ ಪೂಜೆ ನೆರವೇರಿಸಿದಂತೆ ಮಾಡಿ, ದೈವಿಕ ಭಾವನೆಯಲ್ಲಿ ತೇಲಿಸಿ ಹಣ ಕೊಟ್ಟವನ ಮೇಲೆ ಡಬಲ್ ಹಣ ಬೀಳಿಸಿದ್ದಾರೆ. ಹೆಚ್ಚು ಹಣ ಕಂಡ ವ್ಯಕ್ತಿ ಮತ್ತಷ್ಟು ಹಣ ತಂದು ಸುರಿದಿದ್ದಾನೆ. ಪೂಜೆ ನಂತರ 170 ದಿನಗಳ ನಂತರ ಪೂಜಾ ಬಾಕ್ಸ್‌ನ್ನು ಓಪನ್ ಮಾಡಬೇಕೆಂದು ಕಟ್ಟಪ್ಪಣೆ ಮಾಡಿದ್ದಾರೆ. ಹೀಗೆ ಗ್ರಾಮೀಣ ಜನರಿಂದ ಹಣ ವಂಚನೆ





ಕಾರ್ಯ ಮುಂದುವರೆದ ಬೆನ್ನಲ್ಲೆ ಅದೇ ಊರಿನ ರಾಜನಾಯ್ಕ ಎಂಬುವವರ ಮನೆಯಲ್ಲಿ ಸೆ.7 ರಂದು ಪೂಜೆ ನಡೆಯುತ್ತಿರುವಾಗ, ಸೆ.4ರಂದು ಹಣ ನೀಡಿ ಪೂಜೆ ಮಾಡಿಸಿದ್ದ ಕುಮಾರ ನಾಯ್ಕನಿಗೆ ಈ ಪೂಜೆಯಲ್ಲಿ ಅನುಮಾನ ಬಂದಿದ್ದರಿಂದ ತಕ್ಷಣವೇ ತನ್ನ ಮನೆಗೆ ತೆರಳಿ ಪೂಜೆ ಮಾಡಿಟ್ಟಿದ್ದ ಬಾಕ್ಸ್‌ನ್ನು ಬಿಚ್ಚಿ ನೋಡಿದ್ದಾನೆ. 7.50 ಲಕ್ಷ ರೂ ಬದಲಿಗೆ ಬಾಕ್ಸ್‌ನಲ್ಲಿ ಊದುಬತ್ತಿ ಪ್ಯಾಕೇಟ್, ಉಸುಕಿನ ಚೀಲ, ಮೂರು ಟವೆಲ್ ನೋಡಿ ಬೆಚ್ಚಿಬಿದ್ದಿದ್ದಾನೆ. ಕೂಡಲೆ ಎಚ್ಚೆತ್ತುಕೊಂಡ ಕುಮಾರ ನಾಯ್ಕ ಹೊಸಪೇಟೆ ಗ್ರಾಮೀಣ ಪೊಲೀಸರಿಗೆ ದೂರು ನೀಡಿದ್ದಾನೆ.

ಕೂಡಲೇ ಗ್ರಾಮೀಣ ಠಾಣೆ ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್., ಹೆಚ್ಚುವರಿ ಎಸ್ಪಿ ಸಲೀಂಪಾಷ, ಡಿವೈಎಸ್ಪಿ ಟಿ.ಮಂಜುನಾಥ, ಮಾರ್ಗದರ್ಶನದಲ್ಲಿ ಆರೋಪಿಗಳ ಪತ್ತೆಗೆ ಜಾಲ ಎಣೆದು ಬಲೆ ಬೀಸಿದ್ದಾರೆ. ಪರಿಣಾಮ, ಹೊಸಪೇಟೆಯ ಎಲ್‌ಎಲ್‌ವಿ ಯಾತ್ರಿ ನಿವಾಸದಲ್ಲಿ ತಂಗಿದ್ದ ಆರೋಪಿ ಜಿತೇಂದ್ರಸಿಂಗ್ (25), ಕಲ್ಲಹಳ್ಳಿ ಗ್ರಾಮದ ತುಕ್ಯಾನಾಯ್ಕ್ (29), ಶಂಕು ನಾಯ್ಕ (30) ಆರೋಪಿಗಳನ್ನು 35,14,740 ರೂ ಸಮೇತ ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ಒಬ್ಬರು ಪ್ರಕರಣ ದಾಖಲಿಸಿದ್ದು, ವಂಚನೆಗೊಳಗಾದ ಗ್ರಾಮದ ಇನ್ನಿತರರು ದೂರು ನೀಡಲು ಮುಂದಾಗಿದ್ದಾರೆ.

ಹೊಸಪೇಟೆಯ ಗ್ರಾಮೀಣ ಠಾಣೆ ವ್ಯಾಪ್ತಿಯ ಕಲ್ಲಹಳ್ಳಿಯಲ್ಲಿ ಜನರಿಂದ ಹಣ ಪಡೆದು ಡಬಲಿಂಗ್ ಮಾಡಿಕೊತ್ತೇನೆಂದು ವಂಚನೆ ಮಾಡುತ್ತಿದ್ದ ರಾಜಸ್ಥಾನ ಮೂಲಕ ಆರೋಪಿ ಜಿತೇಂದ್ರಸಿಂಗ್ ಮತ್ತು ಕಲ್ಲಹಳ್ಳಿಯ ತುಕ್ಯಾನಾಯ್ಕ್, ಶಂಕುನಾಯ್ಕ್ ಮೂವರನ್ನು ನಗದು ಸಮೇತ ದಸ್ತಗಿರಿ ಮಾಡಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಹೇಳಿದರು.

ನಗರದ ಗ್ರಾಮೀಣ ಠಾಣೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದರು. 7.50 ಲಕ್ಷ ರೂ ಪಡೆದು 170 ದಿನದಲ್ಲಿ 80 ಲಕ್ಷ ಹಣ ಮಾಡಿಕೊಡುವುದಾಗಿ ನಂಬಿಸಿ ವಂಚನೆ ಮಾಡಿದ್ದಾನೆಂದು ಕಲ್ಲಹಳ್ಳಿಯ ಕುಮಾರನಾಯ್ಕ ದೂರು ನೀಡಿದ್ದರಿಂದ, ಪ್ರಕರಣ ದಾಖಲಿಸಿಕೊಂಡು ಪತ್ತೆ ಕಾರ್ಯ ತಂಡ ರಚಿಸಿ ತನಿಖೆ ನಡೆಸಿತು. ಪೊಲೀಸರ ಸಮಯಪ್ರಜ್ಞೆಯಿಂದಾಗಿ ಆರೋಪಿತರನ್ನು ಬಂಧಿಸಿ, ಬಂಧಿತರಿಂದ ಒಟ್ಟು 35,14,740 ನಗದು ಹಣ, ನೋಟು ಎಣಿಕೆ ಯಂತ್ರ ವಶಕ್ಕೆ ಪಡೆಯಲಾಗಿದೆ. ಗ್ರಾಮೀಣ ಪೊಲೀಸ್ ಠಾಣೆಯ ಪಿಐ ನೇತೃತ್ವದ ತಂಡದ ಕಾರ್ಯ ಶ್ಲಾಘನೀಯ. ಆರೋಪಿಗಳ ಪತ್ತೆ ಕಾರ್ಯಾಚರಣೆಯಲ್ಲಿ, ಪಿಐ ಗುರುರಾಜ್ ಆರ್.ಕಟ್ಟಿಮನಿ, ಠಾಣೆಯ ಪಿಎಸ್ಐ ಹೆಚ್.ನಾಗರತ್ನ, ಜಯಲಕ್ಷ್ಮೀ, ಸಿಬ್ಬಂದಿಗಳಾದ ಕೀಮ್ಯಾನಾಯ್ಕ್, ಮೋತಿನಾಯ್ಕ್, ಆರ್.ವೆಂಕಟೇಶ, ಮಂಜುನಾಥ ಮೇಟಿ, ಚಂದ್ರಶೇಖರ್, ವಿ.ರಾಘವೇಂದ್ರ, ಸಣ್ಣ ಕರಿಬಸಜ್ಜ, ಸಣ್ಣ ಗಾಳೆಪ್ಪ, ಅಡಿವೆಪ್ಪ, ಚಂದ್ರಪ್ಪ, ಎಂ.ಸಂತೋಷ ಕುಮಾರ, ನಾಗರಾಜ್ ಬಂಡಿಮೇಗಳ, ಜಗದೀಶ್, ಗೋಪಿನಾಯ್ಕ್, ಜೀಪ ಚಾಲಕ ಜಿ.ನಾಗರಾಜ್ ಸೇರಿದಂತೆ ಇತರರು ಇದ್ದರು ಎಂದರು.

## ವ್ಯಕ್ತಿ ನೀರು ಪಾಲು

**ಹಂಪಿ ಟೈಮ್ಸ್ ಹೊಸಪೇಟೆ:**
ತಾಲೂಕಿನ ಕಮಲಾಪುರದ ಎಲ್ ಎಲ್ ಸಿ ಕಾಲುವೆಯಲ್ಲಿ ಈಜಲು ಹೋಗಿ ಕೊಪ್ಪಳದ ಹುಲಿಗಿಯ ಹನುಮಂತ (38) ಎಂಬುವರು ನೀರು ಪಾಲಾದ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಕೆರೆತಾಂಡಾಕ್ಕೆ ಮಾವನ ಮನೆಗೆ ಆಗಮಿಸಿದ್ದಾರೆ. ಹೊಲಕ್ಕೆ ಹೋಗಿ ನಂತರ ಕಾಲುವೆಗೆ ಗಂಡ ಹೆಂಡತಿ ಬಟ್ಟೆ ಹೊಗೆಯಲು ಹೋಗಿದ್ದಾರೆ. ಈ ವೇಳೆ ಈಜಲು ಹೋದಾಗ ನೀರಿನ ಸುಳಿಯಲ್ಲಿ ಸಿಲುಕಿಕೊಂಡು ನೀರು ಪಾಲಾಗಿದ್ದಾರೆ. ಅಲ್ಲಿದ್ದ ಸ್ಥಳೀಯರು ರಕ್ಷಣೆ ಮಾಡಲು ಪ್ರಯತ್ನ ನಡೆಸಿದರು ಪ್ರಯೋಜನ ವಾಗಿಲ್ಲ. ಸ್ಥಳಕ್ಕೆ ಕಮಲಾಪುರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಘಟನೆ ಒಂದು ಗಂಟೆ ನಂತರ ಅಗ್ನಿ ಶಾಮಕ ದಳದ ಸಿಬ್ಬಂದಿ ಬಂದರು ಪ್ರಯೋಜನವಾಗಿಲ್ಲ. ದಾಖಲೆಗೆ ಕಾರ್ಯಚರಣೆ ನಡೆಸಿದ ಹಾಗೆ ಕೇವಲ ಪೋಟೋಗಳನ್ನು ತಗೆದುಕೊಂಡರು ಹೊರತು ವ್ಯಕ್ತಿಯ ರಕ್ಷಣೆ ಕಾರ್ಯ ಸಮರ್ಪಕವಾಗಿ ನಡೆಸಲಿಲ್ಲ ಎಂದು ಸ್ಥಳೀಯರು ಆರೋಪಿಸಿದರು.


**ವಿಜಯನಗರ ರಾಜಧಾನಿಯಲ್ಲಿ ತೆರಿಗೆ ಸಂಗ್ರಹದ ಖಜಾನೆ..?**
ಪುಟ 2ರಲ್ಲಿ
ಲೇಖಕರು: ಎಂ.ಎಂ.ಶಿವಪ್ರಕಾಶ

**ಸ್ಟುಡೆಂಟ್ ಕಾಲಂನಲ್ಲಿ ವಿದ್ಯಾರ್ಥಿ ಬರಹ** ಪುಟ 2ರಲ್ಲಿ

**ಗರ್ಭಗುಡಿ** ಪುಟ 3ರಲ್ಲಿ
ಲೇಖಕರು: ಜಿ ಶಿವಕುಮಾರ್ ಸೋಗಿ


## ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಇತರೆ ಬಡ ಜನಾಂಗದ ಫಲಾನುಭವಿಗಳಿಗೆ ಹಾಗೂ ಅಂಗವಿಕಲ ಫಲಾನುಭವಿಗಳಿಗೆ 2024–25ನೇ ಸಾಲಿನ ಎಸ್.ಎಫ್.ಸಿ. ಯೋಜನೆಯ 24.10 ರಷ್ಟು, 7.25 ರಷ್ಟು ಹಾಗೂ 5 ರಷ್ಟು ಅನುದಾನದಡಿ ವಿವಿಧ ಸೌಲಭ್ಯಗಳನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು ಸೆಪ್ಟಂಬರ್ 13 ರ ಒಳಗಾಗಿ ಹಗರಿಬೊಮ್ಮನಹಳ್ಳಿಯ ಪುರಸಭೆ ಕಾರ್ಯಾಲಯಕ್ಕೆ ಕಚೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ.

ಪುರಸಭೆ ವ್ಯಾಪ್ತಿಯಲ್ಲಿ ಬರುವ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ ಎಂ.ಎಸ್. ಆಫೀಸ್, ಡಿ.ಟಿ.ಪಿ. ಮತ್ತು ಅಕೌಂಟಿಂಗ್ ಅಂಡ್ ಟ್ಯಾಲಿ ಕಂಪ್ಯೂಟರ್ ತರಬೇತಿಯನ್ನು ನೀಡುವುದು. ಎಸ್.ಎಫ್.ಸಿ. ಯೋಜನೆಯಡಿ 24.10 ರಷ್ಟು ಮಂಜೂರಾಗಿದ್ದು, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2 ಲಕ್ಷದಿಂದ 5.68 ಲಕ್ಷದವರೆಗೆ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 1.20 ಲಕ್ಷದಿಂದ 2 ಲಕ್ಷದವರೆಗೆ ಸಹಾಯಧನ ನೀಡಲಾಗುವುದು. ಇತರೆ ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ ಎಂ.ಎಸ್. ಆಫೀಸ್, ಡಿ.ಟಿ.ಪಿ.ಮತ್ತು ಅಕೌಂಟಿಂಗ್ ಅಂಡ್ ಟ್ಯಾಲಿ ಕಂಪ್ಯೂಟರ್ ತರಬೇತಿ ನೀಡಲಾಗುವುದು. ಎಸ್.ಎಫ್.ಸಿ. ಯೋಜನೆಯಡಿ 7.25 ರಷ್ಟು ಮಂಜೂರಾಗಿದ್ದು, 2.32 ಲಕ್ಷದವರೆಗೆ ಸಹಾಯಧನ ನೀಡಲಾಗುವುದು. ಮತ್ತು ಅದೇ ರೀತಿ ಅಂಗವಿಕಲ ಫಲಾನುಭವಿಗಳಿಗೆ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಎಸ್.ಎಫ್.ಸಿ. ಯೋಜನೆಯಡಿ 5 ರಷ್ಟು ಮಂಜೂರಾಗಿದ್ದು, 4 ಲಕ್ಷದವರೆಗೆ ಸಹಾಯಧನ ನೀಡಲಾಗುವುದು.

**ದಾಖಲಾತಿಗಳು:** ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ, ಇತ್ತೀಚಿನ 4 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸಕ್ತ 2024–25 ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ, ಪ್ರವೇಶಾತಿ ಪಡೆದ ರಶೀದಿ ಪ್ರತಿ, ಅಂಕಪಟ್ಟಿಗಳು, ಹಾಗೂ ಎಂ.ಎಸ್. ಆಫೀಸ್, ಡಿ.ಟಿ.ಪಿ. ಮತ್ತು ಅಕೌಂಟಿಂಗ್ ಅಂಡ್ ಟ್ಯಾಲಿ ಕಂಪ್ಯೂಟರ್ ತರಬೇತಿಗಾಗಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ಮೇಲ್ಕಂಡ ದಾಖಲಾತಿಗಳೊಂದಿಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಅಂಕಪಟ್ಟಿಗಳೊಂದಿಗೆ ಅರ್ಜಿ ಸಲ್ಲಿಸಬೇಕು ಮತ್ತು ಅಂಗವಿಕಲರ ಕಲ್ಯಾಣ ಕಾರ್ಯಕ್ರಮದಡಿ ವೈಯಕ್ತಿಕ ಶೌಚಾಲಯಕ್ಕಾಗಿ ಅರ್ಜಿ ಸಲ್ಲಿಸುವ ಅಂಗವಿಕಲರು, ಮೇಲ್ಕಂಡ ದಾಖಲಾತಿಗಳೊಂದಿಗೆ ಅಂಗವಿಕಲರ ಪ್ರಮಾಣ ಪತ್ರ, ಮನೆಯ ನಮೂನೆ–3, ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಸ್ಥಳದ ಛಾಯಾಚಿತ್ರದೊಂದಿಗೆ ಅರ್ಜಿ ಸಲ್ಲಿಸಬೇಕು ಎಂದು ಹಗರಿಬೊಮ್ಮನಹಳ್ಳಿ ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 27 ವರ್ಷ ಶಿಕ್ಷಕ ಸೇವೆಗೆ ಸಂದ ಗೌರವ


## ಗಡಿಗ್ರಾಮ ನುಂಕನಹಳ್ಳಿ ಶಾಲೆಯ ಮುಖ್ಯಶಿಕ್ಷಕ ಸಿ.ತಿಪ್ಪೇಸ್ವಾಮಿಗೆ ಒಲಿದ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕಲಿಕೆಯಲ್ಲೇ 27 ವರ್ಷಗಳ ಕಾಲ ಸೇವೆ ಸಲ್ಲಿಸಿದ ತಾಲೂಕಿನ ನುಂಕನಹಳ್ಳಿ ಸಕಿಪ್ರಾ ಶಾಲೆಯ ಮುಖ್ಯಶಿಕ್ಷಕ ತಾಯಕನಹಳ್ಳಿ ಸಿ.ತಿಪ್ಪೇಸ್ವಾಮಿ ಅವರಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಮುಡಿಗೇರಿದೆ.

1997ರ ಜನವರಿ 13ರಂದು ಹೊಸಪೇಟೆ ತಾಲೂಕಿನ ಜೀರಿಗನೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿಗೆ ಸೇರಿದ್ದ ಸಿ.ತಿಪ್ಪೇಸ್ವಾಮಿ ಅವರು ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಅದಾದ ನಂತರ 2000ರಲ್ಲಿ ಕೂಡ್ಲಿಗಿ ತಾಲೂಕಿನ ಗಡಿಗ್ರಾಮವಾದ ನುಂಕನಹಳ್ಳಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡ ನಂತರ 24 ವರ್ಷಗಳ ಕಾಲ ಶಿಕ್ಷಕ ವೃತ್ತಿಯಲ್ಲಿ ಅಲ್ಲಿನ ವಿದ್ಯಾರ್ಥಿಗಳ ಭವಿಷ್ಯ ಬೆಳಗುವ ನಿಟ್ಟಿನಲ್ಲಿ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಪರಿಸರ ಪ್ರೀತಿಗೆ ಮೆಚ್ಚುಗೆ:** ನುಂಕನಹಳ್ಳಿ ಎಂಬುದು ತಾಲೂಕಿನ ಕಟ್ಟಕಡೆಯ ಗ್ರಾಮವಾದರೂ ಇಲ್ಲಿನ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾದೇಗುಲದ ಪರಿಸರ ಹಸಿರಾಗಿಸುವ ನಿಟ್ಟಿನಲ್ಲಿ ಗಿಡ, ಮರಗಳನ್ನು ಹೆಚ್ಚಾಗಿ ಬೆಳೆಸುವ ಮೂಲಕ ಪರಿಸರ ಪ್ರೀತಿ ತೋರಿದ ಮುಖ್ಯಶಿಕ್ಷಕ ಸಿ.ತಿಪ್ಪೇಸ್ವಾಮಿ ಸೇರಿ ಅಲ್ಲಿನ ಶಿಕ್ಷಕರ ಕಾರ್ಯ ಗ್ರಾಮಸ್ಥರ ಮೆಚ್ಚುಗೆ ಗಳಿಸಿದೆ. ಹೀಗಾಗಿ, ಸಿ.ತಿಪ್ಪೇಸ್ವಾಮಿಯವರಿಂದ ಶಿಕ್ಷಣ ಕಲಿತ ಸಾಕಷ್ಟು ವಿದ್ಯಾರ್ಥಿಗಳು ಎಂ.ಎಸ್.ಡಬ್ಲ್ಯು, ಬಿಎಸ್ಸಿ ಬಿ.ಇಡಿ ಸೇರಿ ಉನ್ನತ ಶಿಕ್ಷಣದಲ್ಲಿ ಮುಂದುವರಿದಿದ್ದರೆ, ಇನ್ನಷ್ಟು ವಿದ್ಯಾರ್ಥಿಗಳು ಉತ್ತಮ ಬದುಕು ರೂಪಿಸಿಕೊಂಡಿರುವುದು ಇವರ ಸೇವೆಯ ಸಾರ್ಥಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಮುಖ್ಯಶಿಕ್ಷಕ ಸಿ.ತಿಪ್ಪೇಸ್ವಾಮಿ ಅವರಿಗೆ ಜಿಲ್ಲಾಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುವುದು ಹಾಲಿ ಕರ್ತವ್ಯ ನಿರ್ವಹಿಸುವ ನುಂಕನಹಳ್ಳಿ ಹಾಗೂ ಹುಟ್ಟೂರು ತಾಯಕನಹಳ್ಳಿ ಜನರು ಸೇರಿ ಅವರ ಶಿಷ್ಯ ಬಳಗದಲ್ಲಿ ಸಂತಸ ಮನೆ ಮಾಡಿದೆ.



### ಹೊಸಪೇಟೆಯಲ್ಲಿ ಪ್ರಶಸ್ತಿ ಪ್ರದಾನ



ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಹಿನ್ನೆಲೆ ಹೊಸಪೇಟೆಯ ಸಾಯಿಲೀಲಾ ಮಂದಿರದಲ್ಲಿ ಸೆ.9ರಂದು ನಡೆಯುವ ವಿಜಯನಗರ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನುಂಕನಹಳ್ಳಿ ಸ.ಕಿ.ಪ್ರಾ.ಶಾಲೆಯ ಮುಖ್ಯಶಿಕ್ಷಕ ಸಿ.ತಿಪ್ಪೇಸ್ವಾಮಿ ಅವರಿಗೆ 2024–25ನೇ ಸಾಲಿನ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಗುವುದು.

> ಹಳ್ಳಿಗಾಡಿನ ಸರಕಾರಿ ಶಾಲೆಯಲ್ಲಿ ಸತತ 27 ವರ್ಷಗಳ ಕಾಲ ಅಲ್ಲಿನ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯಕ್ಕೆ ಜ್ಞಾನದ ಬೆಳಕು ನೀಡುವ ನಿಟ್ಟಿನಲ್ಲಿ ಸೇವೆ ಸಲ್ಲಿಸಿರುವುದು ನನಗೆ ಪುಣ್ಯದ ಕೆಲಸ ಎಂದು ಭಾವಿಸಿದ್ದೇನೆ. ಈ ವರ್ಷದ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿರುವುದು ಸಂತಸ ತಂದಿದೆ.
>
> – **ಸಿ.ತಿಪ್ಪೇಸ್ವಾಮಿ,** ಮುಖ್ಯಶಿಕ್ಷಕ, ಸ.ಕಿ.ಪ್ರಾ.ಶಾಲೆ, ನುಂಕನಹಳ್ಳಿ.

# ಸ್ಟುಡೆಂಟ್ ಕಾಲಂ

## ಕಾಮಕಸ್ತೂರಿಯ ಕರಾಮತ್ತು

■ ಕೆ. ಗೋಣೆಮ್ಮ. ಜಿ.ಕೋಡಿಹಳ್ಳಿ. ಹಗರಿಬೊಮ್ಮನಹಳ್ಳಿ



ತುಳಸಿಯನ್ನು ಹೋಲುವ ಕಾಮಕಸ್ತೂರಿಗಿಡವನ್ನು ಮನೆಯಂಗಳ ತೋಟಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ತುಂಬಾ ಸುವಾಸನೆಯನ್ನು ಹೊಂದಿರುವ ಈ ಗಿಡದ ಬೀಜಗಳ ಬಳಕೆ ಹೆಚ್ಚು. ಇದು ಕಬ್ಬಿಣ ಮತ್ತು ನಾರಿನಂಶವನ್ನು ಹೊಂದಿದೆ. ದೇಹಕ್ಕೆ ತಂಪನ್ನು ನೀಡುವುದರ ಜತೆಗೆ ಅನೇಕ ರೋಗಗಳಿಗೆ ಮನೆಮದ್ದಾಗಿದೆ. ಕಾಮ ಕಸ್ತೂರಿಯುನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಒಳಸಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಒಸಿ ಮಮ್ ಬೆಸಿಲಿಕಮ್.

**ಔಷಧಿ ಗುಣಗಳು:–**

ದೇಹವನ್ನು ತಂಪಾಗಿರಿಸಲು ಸಹಕಾರಿ: ಬೇಸಿಗೆಯಲ್ಲಿ ತುಂಬಾ ಉಷ್ಣತೆ ಆದಾಗ ದೇಹವನ್ನು ತುಪಾಗಿರಿಸಲು, ರಾಸಾಯನಿಕಗಳಿಂದ ತಯಾರಿಸಿದ ತಂಪು ಪಾನೀಯಗಳನ್ನು ಕುಡಿಯುವ ಬದಲು. ಕಾಮ ಕಸ್ತೂರಿ ಬೀಜವನ್ನು ನೀರಿನಲ್ಲಿ ನೆನೆಹಾಕಿಕೊಂಡು ಕುಡಿಯವುದರಿಂದ ದೇಹದ ಉಷ್ಣತೆಯು ನಿಯತ್ರಣದಲ್ಲಿರುತ್ತದೆ.

ಗಂಟಲು ಬೇನೆಗೆ ಮನೆಮದ್ದು: ಕಾಮಕಸ್ತೂರಿಯ ಹಸಿ ಎಲೆಗಳನ್ನು ಅರೆದು ಅದರಿಂದ ರಸವನ್ನು ತೆಗೆದು ಸೋಸಿಕೊಂಡು, ಆ ರಸಕ್ಕೆ ಸ್ವಲ್ಪ ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಗಂಟಲು ಬೇನೆ ಗುಣ ಮುಖವಾಗುತ್ತದೆ.

ದೇಹದ ತೊಕ ಕಡಿಮೆ ಮಾಡುವಲ್ಲಿ ಸಹಕಾರಿ: ನಿತ್ಯವೂ ಕಾಮಕಸ್ತೂರಿ ಬೀಜದ ಬಳಕೆ ಮಾಡುವುದು ದೇಹದ ತೂಕ ನಿಯಂತ್ರಣಕ್ಕೆ ಸಹಕಾರಿಯಾಗಿದೆ. ಕಾಮ ಕಸ್ತೂರಿ ಬೀಜಗಳನ್ನು ನೀರಿನಲ್ಲಿ ನೆನೆಸಿಟ್ಟುಕೊಂಡು ಪ್ರತಿ ದಿನ ಕುಡಿಯವುದರಿಂದ ದೇಹದ ತೂಕ ಕಡಿಮಯಾಗುತ್ತದೆ.



ರೋಗನಿರೋಧಕ ಶಕ್ತಿಯ ವೃದ್ಧಿ: ಕಾಮ ಕಸ್ತೂರಿಯು ಫ್ಲೈವನೊಯ್ ಅಂಶವನ್ನು ಹೊಂದಿದೆ. ಇದರ ಬೀಜವನ್ನು ನೆನೆಹಾಕಿ, ಹಾಲು ಮತ್ತು ಜೇನುತುಪ್ಪ ಸೇರಿಸಿ ತಂಪು ಪಾನೀಯದ ಹಾಗೆ ಉಪಯೋಗಿಸುವುದರಿಂದ ದೇಹದಲ್ಲಿನ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

ಶೀತ ಜ್ವರಕ್ಕ ಪರಿಹಾರ: ಶೀತವಾಗಿ ಮೂಗಿನಿಂದ ನೀರು ಸುರಿಯತ್ತಿದ್ದರೆ ಮತ್ತು ಜ್ವರ ಬರುತ್ತಿದ್ದರೆ ಕಾಮ ಕಸ್ತೂರಿ ಎಲೆಗಳ ಕಷಾಯವನ್ನು ಮಾಡಿ, ಆ ಕಷಾಯಕ್ಕೆ ಸ್ವಲ್ಪ ಜೇನುತುಪ್ಪವನ್ನು ಸೇರಿಸಿ ಕುಡಿಯವುದರಿಂದ ಶೀತ, ಜ್ವರಗಳು ಕಡಿಮೆಯಾಗುತ್ತದೆ.

ತಲೆಯಲ್ಲಿನ ಹೇನಿನ ನಿಯಂತ್ರಣ: ತುಂಬಾ ಹೇನು ಇದ್ದವರು ಕಾಮಕಸ್ತೂರಿಯ ಎಲೆಗಳನ್ನು ತಲೆಗೆ ಮುಡಿದುಕೊಳ್ಳುವುದರಿಂದ ಹೇನುಗಳ ನಿವಾರಣೆಯಾಗುತ್ತದೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

– ಜಾಹೀರಾತು ವ್ಯವಸ್ಥಾಪಕರು.

# ವಿಜಯನಗರ ರಾಜಧಾನಿಯಲ್ಲಿ ತೆರಿಗೆ ಸಂಗ್ರಹದ ಖಜಾನೆ..,?

**ಖಜಾನೆ ಸಂಪತ್ತು ಸಂರಕ್ಷಣೆಗಾಗಿ ರೂಪಿಸಲಾದ ನಾಗಬಂಧನ । ರಾಣಿಯರ ಅರಮನೆ ಅಂಗಳದಲ್ಲೇ ಖಜಾನೆ**

**ವಿಜಯನಗರ ಚರಿತ್ರೆ ಅಕ್ಷಯ ಪಾತ್ರೆಯಂತಿದೆ । ಬಗೆದಷ್ಟು ವಿಸ್ಮಯಕಾರಿ ಸಂಗತಿ ಬಯಲು ನಿಶ್ಚಿತ**

**ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆಯವರ ಉತ್ಕನನ ಕಾರ್ಯಗಳು ಆಮೆ ವೇಗದಲ್ಲಿ ಸಾಗುತ್ತಿವೆ**

ಹಂಪಿ ಎಂದರೆ ಪ್ರವಾಸಿಗರಿಗೆ ರೋಮಾಂಚನ. ಅಧ್ಯಯನಾಕಾರರು ಸಂಶೋಧಕರಿಗೆ ಚರಿತ್ರಕಾರರಿಗೆ ಚರಿತ್ರೆಯ ಅಕ್ಷಯ ಪಾತ್ರೆ. ವಿಜಯನಗರ ಸಾಮ್ರಾಜ್ಯದ ಕುರಿತು ಬಹುತೇಕ ವಿಷಯಗಳ ಬಗ್ಗೆ ಇತಿಹಾಸ ತಜ್ಞರು ಸಂಶೋಧಕರು, ಪುರಾತತ್ವ ತಜ್ಞರು ಬೆಳಕು ಚೆಲ್ಲುತ್ತಲೇ ಇದ್ದಾರೆ, ವಿಜಯನಗರ ಚರಿತ್ರೆಯ ಅಕ್ಷಯ ಪಾತ್ರೆ. ಅಕ್ಷಯ ಪಾತ್ರೆಯನ್ನು ಬಗೆದಷ್ಟು ವಿಸ್ಮಯಕಾರಿ ಸಂಗತಿಗಳು ಹೊರಬರುತ್ತವೆ.

18ನೇ ಶತಮಾನದಲ್ಲಿ ಬಳ್ಳಾರಿ ಕಲೆಕ್ಟರ್ ಆಗಿ ಬಂದ ರಾಬರ್ಟ್ ಸಿವಿಲ್ ಅವರಿಂದ ಪ್ರಾರಂಭಗೊಂಡ ಹಂಪಿಯ ಶೋಧ ಅಧ್ಯಯನ ಸಂಶೋಧನೆ ಶತಮಾನಗಳ ಕಾಲ ದೇಶಿ. ಮತ್ತು ವಿದೇಶಿ ಸಂಶೋಧಕರರಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ, ಎಂಬತ್ತರ ದಶಕದಲ್ಲಿ ವಿದೇಶಿ ಸಂಶೋಧಕರಾದ ಜಾರ್ಜಮಿಶೇಲ್, ಜಾನ್ ಪ್ರೀಜ್, ವಸುಂಧರಾ ಫಿಲೋಮಿನಾ ಮೊದಲಾದವರು ಹಂಪಿಯನ್ನು ಕುರಿತು ಅಧ್ಯಯನ, ಸಂಶೋಧನೆ ಮಾಡಿದ್ದಾರೆ. ಆದರೆ ಇಷ್ಟೆಲ್ಲಾ ದೇಶಿ ಹಾಗೂ ವಿದೇಶಿ ತಜ್ಞರು ಅಧ್ಯಯನ ಸಂಶೋಧನೆ ಕೈಗೊಂಡರು ಸುಮಾರು 23 ಚ.ಕಿ.ಮೀ ವ್ಯಾಪ್ತಿಯ ಈ ನಗರದ ಬಗ್ಗೆ ಇದು ಮಿಥ್ಯಂ ಎಂದು ಹೇಳಲು ಸಾಧ್ಯವಾಗುತ್ತಿಲ್ಲ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Scan For Digital Colourful
HAMPI TIMES E-paper

ಹಂಪಿ ಒಂದು ವಿಸ್ಮಯ. ಹಂಪಿಯ ಚರಿತ್ರೆಯನ್ನು ಈಗ ಮರು ಅಧ್ಯಯನ, ವಿಶ್ಲೇಷಣೆ ಮಾಡಿದಷ್ಟು ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಹಿಂದೆ ಬರೆದ ಚರಿತ್ರೆ ಈಗ ಹೊಸ ವಿಶ್ಲೇಷಣೆ ಯೊಂದಿಗೆ ಬದಲಾಗುತ್ತಿದೆ. ಈಗ ಚರಿತ್ರೆಯು ಮರು ಅಧ್ಯಯನಗಳು ನಡೆಯುತ್ತಿವೆ. ಅಧ್ಯಯನ ಮರುಶೋಧನೆ ಅವಶ್ಯಕತೆ ಇದು ಒಂದು ಕಡೆಯಾದರೆ ಹಂಪಿಯ ಕೆಲ ವಿಷಯಗಳ ಬಗ್ಗೆ, ಸ್ಮಾರಕಗಳ ಬಗ್ಗೆ ಇದುವರೆಗೂ ನಿಖರವಾಗಿ ಹೇಳಲು ಆಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಪುರಾತತ್ವ ಇಲಾಖೆ ಯವರ ಉತ್ಕನನ ಕಾರ್ಯಗಳು ಆಮೆ ವೇಗದಲ್ಲಿ ಸಾಗುತ್ತಿವೆ. ಸ್ಮಾರಕಗಳ ಬಳಿ ಹಾಕಿರುವ ನಾಮಫಲಕಗಳು ಗೊಂದಲದಲ್ಲಿವೆ ಅನಿಸುತ್ತದೆ. ಸ್ಮಾರಕಗಳ ಮುಂದೆ ಹಾಕಿರುವ ನಾಮಫಲಕ ಸಾಕ್ಷಿ ಯಾಗಿದೆ. ಆನೆ ಸಾಲಿನ ಆವರಣದ ಉತ್ತರ ತುದಿಯಲ್ಲಿ ನಿರ್ಮಿಸಿರುವ ಮಂಟಪವನ್ನು ಕಾವಲುಗಾರನ ಮನೆಯೆಂದು ಫಲಕ ಹಾಕಲಾಗಿದೆ. ಈ ಫಲಕದ ಒಳಗಡೆ ಕಾವಲುಗಾರನ ಮನೆಯೆಂದು ಜನಪ್ರಿಯವಾ ಗಿದ್ದರು ಇದನ್ನು ಸಮಾರೋಪ ಭವನ ಮತ್ತು ಖಜಾನೆ ಎಂದು ಕರೆಯಲಾಗುತ್ತಿದೆ ಎಂದು ನಮೂದಿಸಲಾಗಿದೆ. ಅಂದರೆ ಇದು ಕಾವಲುಗಾರನ ಮನೆಯೋ ಅಥವಾ ಖಜಾನೆಯೋ ಎನ್ನುವ ಸ್ಪಷ್ಟತೆ ಇಲ್ಲ.

ಆನೆಸಾಲು ಆವರಣದಲ್ಲಿ ಇರುವ ಸ್ಮಾರಕವನ್ನು ಕುದುರೆ ಕಟ್ಟವ ಸ್ಥಳವೆಂದು ಸಹ ಜನಸಾಮಾನ್ಯರು ಕರೆಯುತ್ತಿದ್ದರು. ಇದು ಕಾವಲುಗಾರನ ವಸತಿಗಾಗಿ ಕಟ್ಟಿದ ಕಟ್ಟಡದಂತೆ ಕಂಡು ಬರುವುದಿಲ್ಲ. ಏಕೆಂದರೆ ಇದು ಎತ್ತರವಾಗಿ ನಿರ್ಮಿಸಲಾಗಿದ್ದು, ಒಳಭಾಗದಲ್ಲಿ ವಾಸ್ತವ್ಯಕ್ಕಾಗಿ ಇರುವ ಹಾಗೆ ಈ ಕಟ್ಟಡ ನಿರ್ಮಾಣಗೊಂಡರುವುದಿಲ್ಲ. ನಾಮಫಲಕದಲ್ಲಿ ನಮೂದಿಸಿರುವ ಪ್ರಕಾರ ಈ ಕಟ್ಟಡ ಖಜಾನೆ ಯಾಗಿರದೆ ತೆರಿಗೆ ಸಂಗ್ರಹಿಸುವ ಕಟ್ಟಡ ವಾಗಿರಬಹುದು. ಈ ಕಟ್ಟಡದ ಮುಂದೆ ನಿಂತು ತಾನು ತಂದ ತೆರಿಗೆಯನ್ನು ಮೇಲೆ ಕುಂತವನಿಗೆ ಕೈಎತ್ತಿ ತಲುಪಿಸುವಂತೆ ವಿನ್ಯಾಸದ ಕಟ್ಟಡ ಎನ್ನುತ್ತಾರೆ. ಕಮಲ್ ಮಹಲ್ ಆವರಣದಲ್ಲಿ ಕೋಟೆಯಲ್ಲಿ ಅಂದರೆ ಈ ಕಟ್ಟಡದ ಬಲ ಭಾಗಕ್ಕೆ ಒಂದು ಕಟ್ಟಡವಿದೆ ಈ ಕಟ್ಟಡವನ್ನು ಖಜಾನೆಯೆಂದು ಕರೆಯುತ್ತಾರೆ. ಅಂದರೆ ಆನೆ ಸಾಲಿನ ಬಲಭಾಗದ ಕಟ್ಟಡದಲ್ಲಿ ಸಂಗ್ರವಾಗುತ್ತಿದ್ದ ತೆರಿಗೆಯನ್ನು ತಂದು ಈ ಕಟ್ಟಡದಲ್ಲಿ ಸಂಗ್ರಹಿಸಲಾಗುತ್ತಿತ್ತು ಇದನ್ನು ಖಜಾನೆ ಎಂದು ಕರೆಯುತ್ತಿದ್ದಾರೆ.









ಖಜಾನೆ ಅಂತ ನಂಬಲು ಹಲವಾರು ಕಾರಣಗಳಿವೆ. ಇದು ರಾಣಿಯರ ಬೇಸಿಗೆಯ ಅರಮನೆಗಳಿದ್ದು ಅದಕ್ಕೆ ಸುತ್ತಲೂ ಎತ್ತರವಾದ ರಕ್ಷಣಾ ಕೋಟೆ ಹಾಗೂ ಇದಕ್ಕೆ ಕಾವಲು ಗೋಪುರಗಳು ಇವೆ ಹೀಗಾಗಿ ಇದು ಅತ್ಯಂತ ಸುರಕ್ಷಿತ ತಾಣವಾಗಿದೆ. ಇದು ತೆರಿಗೆ ಸಂಗ್ರಹಿಸುವ ಕಟ್ಟಡದ ಪಕ್ಕದಲ್ಲಿಯೇ ಇದೆ. ಈ ಕಟ್ಟಡದಲ್ಲಿ ಸಂಗ್ರಹಿಸುತ್ತಿದ್ದ ತೆರಿಗೆಯನ್ನು ಈ ಖಜಾನೆ ಕಟ್ಟಡಕ್ಕೆ ಸುಲುಭವಾಗಿ ಸ್ಥಳಾಂತರ ಮಾಡಲು ಸಾದ್ಯವಿದೆ. ತೆರಿಗೆ ಸಂಗ್ರಹದ ಕಟ್ಟಡ ದಿಂದ ಖಜಾನೆ ಕಟ್ಟಡದ ಕೋಟೆಯ ಉತ್ತರದ ಬಾಗಿಲಿನ ಮೂಲಕ ಪ್ರವೇಶವಿದೆ. ಬಹಳ ಮುಖ್ಯವಾದ ವಿಷಯವೆಂದರೆ, ನಂಬಿಕೆಯಿಂದ ಬಂದಿರುವ ಸಂಗತಿ. ಅದೇನೇಂದರೆ ಎಲ್ಲಿನಿಧಿ, ಸಂಪತ್ತು ಇರುತ್ತದೆಯೋ ಅಲ್ಲಿ ಹಾವುಗಳು ಇರುತ್ತವೆ ಎಂದು. ಈ ಹಿನ್ನೆಲೆಯಲ್ಲಿ ಈ ಕಟ್ಟಡದ ವಿನ್ಯಾಸವನ್ನು ಗಮನಿಸಿದಾಗ ಈ ಖಜಾನೆಯ ಕಟ್ಟಡದ ಮೇಲಿನ ಭಾಗದ ಸುತ್ತ ಹಾವಿನ ಮಾದರಿಗಳನ್ನು ರೂಪಿಸಲಾಗಿದೆ. ಸುತ್ತಲಿನ ಹಾವುಗಳ ಮಾದರಿ ಗಳನ್ನು ನೋಡಿದಾಗ ಇದು ಸಂಪತ್ತಿನ ಭಂಡಾರವೆಂದು ಪರಿಗಣಿಸ ಬಹುದಾಗಿದೆ. ಈ ಬಗ್ಗೆ ತಜ್ಞರು ವಿಶ್ಲೇಷಣೆ ಮಾಡಬೇಕಿದೆ. ಏಕೆಂದರೆ ಇದಕ್ಕೆ ಯಾವುದೇ ಶಾಸನ, ಸಾಹಿತ್ಯದ ಆಧಾರಗಳು ಇದುವರಿಗೆ ಲಭ್ಯವಾಗಿಲ್ಲದಿರುವುದೆ ಇದು ವಿಜಯನಗರದ ಸಾಮ್ರಾಜ್ಯದ ಖಜಾನೆ ಎಂದು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಈಗ ಈ ಕಟ್ಟಡದಲ್ಲಿ ಈ ಪ್ರದೇಶದ ಉತ್ಖನನದಲ್ಲಿ ದೊರೆತ ಸೂಕ್ಷ್ಮ ಅವಶೇಷಗಳನ್ನು ಸಂಗ್ರಹಿಸಿ, ಪ್ರದರ್ಶನಕ್ಕಿಡಲಾಗಿದೆ.

## ಬದುಕಿನಲ್ಲಿ ನೆಮ್ಮದಿಗರಸಿ ಅಂಡಲೆಯುವ ಮಾನವ

■ **ಡಾ. ಯಲ್ಲಮ್ಮ ಕೆ**

ಅಧ್ಯಾತ್ಮಿಕ ತಳಹದಿಯ ಮೇಲೆ ಕಟ್ಟಲ್ಪಟ್ಟ ನಮ್ಮ ಭಾರತೀಯ ಸಂಸ್ಕೃತಿಯು ಜಗತ್ತಿನಲ್ಲಿಯೇ ಮಹತ್ವದ ಸ್ಥಾನವನ್ನು ಹೊಂದಿದೆ. ಕಾಯಕದಲ್ಲಿ ಕೈಲಾಸವನ್ನು ಕಂಡು, ಶ್ರಮ ಸಂಸ್ಕೃತಿಯನ್ನು ಪರಿಪಾಲಿಸುತ್ತಾ ಬಂದಿರುವ, ಕೃಷಿ ಪ್ರಧಾನವಾದ ನಮ್ಮ ಭಾರತ ದೇಶದಲ್ಲಿ ಜಾಗತೀಕರಣ, ನಗರೀಕರಣ, ಕೈಗಾರೀಕರಣದ ಪ್ರಭಾವದಿಂದಾಗಿ ಜನರಲ್ಲಿ ಸ್ವಾರ್ಥ ಮನೆಮಾಡಿ ಅಭಿವೃದ್ಧಿಯ ಹಪಾಹಪಿತನದಿಂದ, ಔನ್ನತ್ಯಕ್ಕೇರುವ ಧಾವಂತದಲ್ಲಿ ಬದುಕಿನಲ್ಲಿ ಅಶಾಂತಿ ಉಂಟಾಗಿ ನೆಮ್ಮದಿಯನ್ನರಿಸಿ ಅಂಡಲೆಯುತ್ತಿದ್ದಾನೆ.

ಇದನ್ನೇ ಬಂಡವಾಳವನ್ನಾಗಿಸಿಕೊಂಡ ಕೆಲವರು ಅನೇಕ ವ್ಯಕ್ತಿತ್ವ ವಿಕಸನ ಶಿಬಿರಗಳು, ವ್ಯಕ್ತಿತ್ವ ವಿಕಸನದ ಕುರಿತಾಗಿ ಕೃತಿಗಳು ಬಂದು. ದೋಸೆಯಂತೆ ಬಿಕರಿಯಾದರೂ ಕೂಡ: ಅದರಲ್ಲಿನ ವಸ್ತು ವಿಷಯ ಯಾರೊಬ್ಬರ ಮಸ್ತಕಕ್ಕೆ ಇಳಿಯದಿರುವುದೂ ವಿಧಿ ವಿಪರ್ಯಾಸ. ಇಂತಹ ವ್ಯಕ್ತಿತ್ವ ವಿಕಸನದ ಶಿಬಿರಗಳನ್ನೇರ್ಪಡಿಸಿದವರೇನೋ ಕೃತಿಗಳನ್ನು ಬರೆದು ಮಹಾನ್ ಸಾಹಿತಿಗಳೆನಿಸಿಕೊಂಡವರು, ಆರ್ಥಿಕ ಅಭಿವೃದ್ಧಿ ಹೊಂದಿದರಾದರೂ ಅವರಂತರಾಳದಲ್ಲೂ ಲೋಕ ವ್ಯವಹಾರಗಳ ದ್ವಂದ್ವಯುದ್ಧದ ಸರಣಿ ನಡದೇ ಇದೆ.

ಈ ಜೀವ ಜಗತ್ತಿನಲ್ಲಿ ಅಜ್ಞಾನದ ಕತ್ತಲೆ ತೊಡೆದು 'ಸತ್ಯ ದರ್ಶನ' ಮಾಡಿಸಿದ ಅದೆಷ್ಟೋ ಸಾಧು ಸತ್ಪುರುಷರು, ಸಂತರು, ಶರಣರು, ದಾರ್ಶನಿಕರು, ನಿಸ್ಸಾರ ಜೀವನದ ಸಾಫಲ್ಯದ ಬಗ್ಗೆ ಹಲವಾರು ತತ್ವ ಸಿದ್ಧಾಂತಗಳನ್ನು ಹುಟ್ಟುಹಾಕಿದ್ದಾರೆ. ಪೌರಾಣಿಕ ಹಿನ್ನಲೆಯುಳ್ಳ ಸ್ವಾರಸ್ಯಕರ ಕಥೆ, ಉಪಕಥೆಗಳನ್ನು ಹೆಣೆದು ನಮಗೆ ಉಣಬಡಿಸಿದ್ದಾರೆ. ಉಂಡದ್ದು ಅರಗಿಸಿಕೊಳ್ಳಲಾಗದೆ. ಉಬ್ಬಸದಿಂದ ನಾವಿಂದು ನರಳಾಡುತ್ತಿದ್ದೇವೆ. 'ಜೀವನದ ಸಾರ' ತಿಳಿಯಲು ಹದಿನೆಂಟು ಪುರಾಣಗಳನ್ನು, ವೇದೋಪನಿಷತ್‌ಗಳನ್ನು, ರಾಮಾಯಣ, ಮಹಾಭಾರತ, ಬೈಬಲ್, ಕುರಾನ್, ಮುಂತಾದ ದಾರ್ಶನಿಕ ಗ್ರಂಥಗಳನ್ನೇ ಓದಬೇಕೆ? ಮನುಷ್ಯ ಮಾನವೀಯತೆ ಮರೆಯದೆ, ಸ್ವಾರ್ಥ ಪದೇ ಪದೇ ಮೆರೆಯದ, ಮನುಷ್ಯ ಮನುಷ್ಯನಾಗಿ ಬಾಳಿದರೆ ಸಾಲದೇ?

**ಈ ಹಿನ್ನಲೆಯಲ್ಲಿ ನಾವು ಮಕ್ಕಳಿಂದ ಕಲಿಯಬೇಕಾದದ್ದು ಬಹಳಷ್ಟಿದೆ :** ನಮ್ಮ ಮನೆಯ ಮುಂದಿನ ನಲ್ಲಿಯಲ್ಲಿ ಒಂದು ಕೊಡ ನೀರು ತುಂಬಿ ಮತ್ತೊಂದು ಕೊಡ ನಲ್ಲಿಗೆ ಇಟ್ಟು ತಾಯಿ ಅದನ್ನು ನೋಡಿಕೊಳ್ಳಲು ತನ್ನ ಪುಟ್ಟ ಮಗನಿಗೇಳಿ ಒಳನಡೆದು ಬರುವಷ್ಟರಲ್ಲಿ ಕೊಡ ತುಂಬಿ ಹರಿಯುವುದನ್ನು ಕಂಡು ಆ ಮಗು ನಲ್ಲಿ ಬಂದ್ ಮಾಡುತ್ತದೆ ಆ ಪುಟ್ಟ ಮಗುವಿಗಿರುವ ಪ್ರಶ್ನೆ ನಾವು ಹೋಟಲ್ ನಲ್ಲಿ ಹ್ಯಾಂಡ್ ವಾಶ್ ಮಾಡುವಾಗ, ವಸತಿ ನಿಲಯಗಳಲ್ಲಿ, ಅತಿಥಿಗೃಹಗಳಲ್ಲಿ ಸ್ನಾನ ಮಾಡುವಾಗ ಆಗತ್ಯಕ್ಕಿಂತ ಹೆಚ್ಚಿಗಾಗುವ ನೀರಿನ ಅಪವ್ಯಯ ನಮ್ಮ ಅರಿವಿಗೆ ಬರುವುದಿಲ್ಲ ಅಥವಾ ದುರುದ್ದೇಶಪೂರಕವಾಗಿರುತ್ತದೆ.

ಶಾಲೆಯಲ್ಲಿ ಮಕ್ಕಳು ತಮ್ಮ ಗೆಳೆಯರೊಂದಿಗೆ ತಾವು ತಂದಿದ್ದ ಲಂಚ್ ಬಾಕ್ಸ್‌ನ್ನು ಹಂಚಿಕೊಂಡು ತಿನ್ನುವ ಮಕ್ಕಳ ತಿಳಿ ಮನಸ್ಸನ್ನು ಕಲುಷಿತಗೊಳಿಸುತ್ತೇವೆ. ಮಕ್ಕಳಿಗೆ ಪ್ರೀತಿಯ ಬೆಲೆ ತಿಳಿದಿದೆ. ದೊಡ್ಡವರಿಗೆ ಜಾತಿಯ ಅಮಲು ತಲೆಗೇರಿದ ಕಾರಣವಾಗಿ.

ಮಗು ತಾನು ಉಣ್ಣುವ ಅನ್ನದ ಹಾಲಿನಲ್ಲಿ ಒಂದೆರೆಡು ತುತ್ತು ಮನೆಯಲ್ಲಿ ಸಾಕಿದ ಬೆಕ್ಕಿಗೆ ನೀಡಿ ತಾನು ಉಣ್ಣುತ್ತದೆ. ನಾವು ಇಂದು ಬಾಗಿಲು ಮುಚ್ಚಿ ಊಟಮಾಡುವ ಸಂಸ್ಕೃತಿಯ ಕಡೆಗೆವಾಲಿದ್ದೇವೆ. ಅಪಾರ್ಟ್‌ಮೆಂಟ್‌ನ ಹೊರ ಮೈದಾನದಲ್ಲಿ ಎಲ್ಲ ಮಕ್ಕಳೊಂದಿಗೆ ನಕ್ಕು ನಲಿದಾಡುತ್ತಿರುವ ಮಗನನ್ನು ಕರೆದು ಬಯ್ದು ಶಿಸ್ತಿನ ಪಾಠ ಹೇಳುತ್ತೇವೆ.

ಪಕ್ಕದ ಮನೆಯವರನ್ನು ಕಂಡು ಒಂದು ಹೂ ನಗೆ ಚೆಲ್ಲಿ ಮಾತನಾಡಿಸುವುದಿಲ್ಲ. ನೆಮ್ಮದಿಗಾಗಿ ಗುಡಿ, ಗುಂಡಾರ. ಪಾರ್ಕ್‌ಗಳಿಗೆ ಸುತ್ತುವುದನ್ನು ಬಿಡುವುದಿಲ್ಲ. ? ಮಗು ತನ್ನ ಪುಸ್ತಕಗಳನ್ನು ಜೋಡಿಸುವುದು. ಆಟಿಕೆಗಳನ್ನು ಜೋಡಿಸುವುದು ಮತ್ತೆ ಬಿಸುಡುವುದು ಮತ್ತೆ ಮತ್ತೆ ಅದೆ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತದೆ, ಸದಾ ಚಟುವಟಿಕೆ ಯಿಂದಿರುತ್ತವೆ. ನಾವುಗಳು ಸೋಮಾರಿಗಳಾಗಿ ಮಿಕ್ಸರ್. ಗ್ರೆಂಡರ್, ವಾಷಿಂಗ್ ಮಶಿನ್‌ಗಳ ಮೊರೆಹೋಗಿ ಬೊಜ್ಜು ಕರಗಿಸಿಕೊಳ್ಳಲು ಜಿಮ್‌ಗೆ ಹೋಗುವುದು ಇಂದು ತೀರಾ ಸಾಮಾನ್ಯ ಸಂಗತಿ, ಮಕ್ಕಳಿಂದ ನಾವು ಕ್ರಿಯಾಶೀಲವಾಗಿರುವುದನ್ನು ಕಲಿಯ ಬಹುದಾಗಿದೆ. ಹೀಗೆ ಜೀವನದ ಚಿಕ್ಕ ಚಿಕ್ಕ ಸಂಗತಿಗಳಿಂದ ಸತ್ಯದರ್ಶನ ಮಾಡಿಕೊಂಡು ಆದರ್ಶಗಳನ್ನು ಪಾಲಿಸುತ್ತಾ ಹೋದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಸಮಾಜಕ್ಕೆ ಹೇಳುವುದಕ್ಕಿಂತ ತನ್ನ ತಾನರಿಯುವುದು ಮೇಲು. ಅದಕ್ಕೆ ಶರಣರು ಹೇಳಿದ್ದು ನಡೆ ನುಡಿ ಒಂದಾಗಿರಬೇಕು.ಸಿದ್ಧಾಂತಕ್ಕೆ ಬದ್ಧರಾಗಿರಬೇಕು. ಆಗ ಬದುಕು ಶುದ್ಧವಾಗುತ್ತದೆ. ಅದು ನೆಮ್ಮದಿಯನ್ನು ನೀಡುತ್ತದೆ ಎನ್ನುವ ಆಶಯದೊಂದಿಗೆ.

## ಕವಿ ಮನಸು

### ಗಿಡಗಳ ಪ್ರೀತಿಸು



ಫಲವನು ಬಯಸದೆ ಒಳಿತನು ಮಾಡುವ
ಕಾರ್ಯವು ಉತ್ತಮ ತಿಳಿದಿರಲಿ
ದೀನರ ಕಂಡರೆ ನೆರವನು ನೀಡಿರಿ
ದೇವನು ಹರಸುವ ಒಲವಿನಲಿ


ಸೂರ್ಯನು ಉದಯಿಸಿ ನೀಡುವ ಶಕ್ತಿಯ
ಜೊತೆಯಲಿ ಬೆಳಕು ಅವನಿಂದ
ಹಸಿರಿನ ಕಾನನ ಉಸಿರನು ಕೊಡುವುದು
ಬಯಸದು ಏನನು ನಮ್ಮಿಂದ

ಅರಳಿದ ಹೂಗಳು ಚೆಲ್ಲುವ ಗಂಧವು
ಕೊಡುವುದು ನಮಗೆ ಆನಂದ
ಗಿಡಗಳ ಪ್ರೀತಿಸು ಪರಿಸರ ಉಳಿಸಲು
ಬೆಳೆಸಲು ತೊಡಗು ಒಲವಿಂದ

ಸತ್ಯದ ಮಾರ್ಗವ ಹಿಡಿದಿರು ಬಾಳಲಿ
ನೆನಪಲಿ ಉಳಿಯಲಿ ಈ ಅಂಶ
ಒಳ್ಳೆಯ ಕೆಲಸವ ಮೆಚ್ಚುವರೆಲ್ಲರು
ದೊರೆವುದು ಉತ್ತಮ ಫಲಿತಾಂಶ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಅಜ್ಜಿ



ನೀವು ಚೆನ್ನಾಗಿದ್ದೀರಾ?
ಚೆನ್ನಾಗಿ ಇರುವೆ,
ನಿಮಗೆ ಮೊಮ್ಮಕ್ಕಳಂತೆ?
ಹೌದು ಕಣೋ,
ಮರಿ ಮೊಮ್ಮಕ್ಕಳು ಇದ್ದಾರಂತೆ?
ಹೌದು ಕಣೋ,
ಗಿರಿಮೊಮ್ಮಕ್ಕಳು ಉಂಟಂತೆ?
ಹೌದು ಕಣೋ,
ಆಯ್ತು ಬಿಡ್ರಿ ಎಲ್ಲಾ ಕಂಡಿರ್?
ಇನ್ನೇನು ಉಳಿದಿದೆ ಬಾಕಿ?
ಇನ್ನೂ ಸಾಕಷ್ಟಿದೆ ಕಣೋ,
ಸಂದರ್ಶನ ಮಾಡಿದವ ಸುಸ್ತು!!!

– ಚಂದ್ರಶೇಖರಯ್ಯ ರೋಣದಮಠ

### ವಿನಾಯಕ


ವಿಘ್ನಗಳ ನಾಶಕ ವಿನಾಯಕ
ಭಕ್ತರ ಸಲಹೋ ಗಣನಾಯಕ
ಕಷ್ಟಗಳ ನಿವಾರಿಸು ಕರಿಮುಖ
ವಂದಿಪೆವು ನಿನ್ನ ಗಜಮುಖ
ನಮಿಪೆವು ಪಾದಕ್ಕೆ ಸುಮುಖ

ಎಲ್ಲರ ಬಾಳಲ್ಲೂ ಸುಖ ತರುವವ ನೀನೇ
ಮೊದಲ ಪೂಜೆ ಎಂದಿಗೂ ನಿನಗೆ ತಾನೇ
ಭಕುತರ ನೆಚ್ಚಿನ ಶಿವ ಪಾರ್ವತಿ ಪುತ್ರ
ಗಣಪನು ಜಗವಂದಿತ ಎಲ್ಲರ ಎಲ್ಲರ
ಪ್ರೀತಿಯ ಪಾತ್ರ
ವಿದ್ಯಾ ಮೂರ್ತಿಯೇ ನಮಗೆ ನೀಡು
ನಿನ್ನಯ ಕರುಣ
ನಿನ್ನ ಮಹಿಮೆಯು ಎಂದಿಗೂ ಅನಂತ
ಬಲು ಗಹನ

– ಚೇತನ ಭಾರ್ಗವ ಬೆಂಗಳೂರು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಗರ್ಭಗುಡಿ..!



ಈ ಅಪರ ರಾತ್ರಿಯಲ್ಲಿಯೋ ಅಷ್ಟು ದೂರದಿಂದಲೆ ಎದ್ದು ಕಾಣುತ್ತಿದ್ದ ಆ ಗುಡಿ, ಎತ್ತರದ ದಿಬ್ಬದ ಮೇಲೆ ಸಮತಟ್ಟಾದ ನೆಲಹಾಸುವಿನ ಮಧ್ಯೆ ಆಗತಾನೆ ಅರಳಿನಿಂತ ಸ್ವೇತ ಗುಲಾಬಿಯಂತೆ ಕಂಗೊಳಿಸುತಿತ್ತು ಈ ಭವ್ಯ ಮಂದಿರದ ಮೇಲೆ ಬಿದ್ದ ಹುಣ್ಣಿಮೆಯ ಚಂದ್ರನ ಕಿರಣಗಳು ಗುಡಿಯ ಒಳಹೊಕ್ಕು ಒಮ್ಮೆಗೆ ಪ್ರತಿಪಲಿಸಿ ಅದರ ಸುತ್ತಲೂ ಒಂದು ರೀತಿಯ ದೈವೀಕ ಪ್ರಭೆಯನ್ನು ಉಂಟುಮಾಡಿತ್ತು.

ಹಾಗೆ ಚುಮು ಚುಮು ಬೆಳಗು ಕತ್ತಲೆಯ ಪರೆದೆಯನ್ನು ಸರಿಸುತ್ತಾ ನೇಸರನು ತನ್ನ ಕಿರಣಗಳನ್ನು ಆ ಗುಡಿಯ ಮೇಲೆ ಹರಡುತ್ತಿರುವಾಗಲೆ, ಇಂಪಾದ ಹಾಡು, ಹಾಡಿಗೆ ತಕ್ಕುದಾಗಿ ಜಲಕ್ ಜಲಕ್ ಎನ್ನುತ್ತ ಮೆಲುವಾಗಿ ಕೇಳುಸುತ್ತಿದ್ದ ಗೆಜ್ಜೆಯ ಸಪ್ಪಳ. ಇದೇನಾಶ್ಚರ್ಯ...! ಇಷ್ಟೊಂದು ನಸು ಮುಂಜಾನೆ ಅದೂ ಬೆಳ್ಳಂಬೆಳಗ್ಗೆ ಊರಿನಿಂದ ಇಷ್ಟೊಂದು ದೂರದಲ್ಲಿರುವ ದೇವಸ್ಥಾನದಲ್ಲಿ ಎನ್ನುತ್ತಾ ಲಘುಬಗೆಯಿಂದ ಒಂದೊಂದೆ ಮೆಟ್ಟಿಲಗಳನ್ನು ಹತ್ತುತ್ತಾ ಮೇಲೆ ಬಂದು ನೋಡಿದರೆ...!

ಅಬ್ಬಾ...! ಇವಳಾರಿರಬಹುದು...? ಅದೆಂತ ಚಲುವು..! ಇವಳೇನು ಮನುಷ್ಯಳಿರಬಹುದೆ, ದೇವತೆ ಏನಾದರೂ ಸ್ವರ್ಗದಿಂದ ಇಳಿದು ಬಂದಳೆ...? ತಿದ್ದಿ ತೀಡಿದಂತಹ ಮೈಕಟ್ಟು, ಸಪೂರವಾದ ಸ್ವಂಟ, ನೀಳ ಜಡೆ, ಸ್ವೆತವರ್ಣದ ತಿ(ಬಿ)ಳಿಯಾದ ನಾರುಡಿಗೆಯಲ್ಲಿ ಸುತ್ತಿಟ್ಟ ಸ್ಪಟಿಕದಂತಿದ್ದ ಇವಳು ಯಾರಿರಬಹುದು..? ಅದು ಇಷ್ಟು ನಸುಬೆಳಕಿನಲ್ಲಿ ಎನ್ನುತ್ತ ಇನ್ನಷ್ಟು ಮತ್ತೊಷ್ಟು ಅವಳ ಹತ್ತಿರ ನಾನು ಹೊದಂತೆಲ್ಲ ಅವಳು ಗಾಬರಿಗೊಂಡು ಬರ ಬರನೆ ಗುಡಿಯ ಮುಖ್ಯ ಬಾಗಿಲ ಕಡೆ ಓಡಿ ಹೋಗಬೇಕೆ...! ಮರುಕ್ಷಣವೆ ದಡಾರ್ ಎಂದು ದೇವಾಸ್ಥಾನದ ಬಾಗಿಲನ್ನು ಹಾಕಿದ ಶಬ್ದ, ಹಿನ್ನೆಲೆಯಲ್ಲೇ ಯಾರೊ ಚಿಟಾರನೆ ಚೀರಿಕೊಂಡಂತೆ...!

ಒಂದು ಕಡೆ ಭಯ, ಇನ್ನೊಂದು ಕಡೆ ಆಶ್ಚರ್ಯ..! ಧೈರ್ಯಮಾಡಿ ಗುಡಿಯ ಬಾಗಿಲ ಬಳಿ ನಿಂತು, ನೀನು ಯಾರು? ಗುಡಿಯ ಬಾಗಿಲನ್ನು ಏಕೆ ಹಾಕಿಕೊಂಡೆ ಹಾಗೇಕೆ ಚೀರಿಕೊಂಡೆ? ಎಂದು ಕೇಳುತ್ತಾ ನಿದಾನವಾಗಿ ಗುಡಿಯ ಬಾಗಿಲನ್ನು ತೆರೆಯುತ್ತಲೇ ಅಲ್ಲಿ ಯಾರೂ ಕಾಣಲಿಲ್ಲ..! ಗರ್ಭಗುಡಿಯಲ್ಲಿದ್ದ ದೇವರ ಮೂರ್ತಿಯ ಹಿಂದೆ ಯಾರೊ ಕದಲಿದಂತಾಯಿತು..! ಅಷ್ಟೆ ಮೈಯಲ್ಲಿ ಬಿಸಿಯಾಗಿ ಬೆವತು ಭಯಗೊಂಡು ಎಚ್ಚರವಾಗಿ ನೋಡಿದರೆ...! ಅಯ್ಯೋ... ದೇವರೆ... ಮತ್ತದೇ ಕನಸು...!.

ಕಳೆದ ಒಂದು ವರ್ಷದಿಂದ ತಿಂಗಳಿಗೆ ಒಂದೊ ಎರಡೊ ಬಾರಿ ಈ ರೀತಿ ನಿದ್ರೆಗೆಡುತ್ತಿರುವುದು ಮನಸ್ಸಿಗೆ ಸ್ವಲ್ಪ ಕಸಿವಿಸಿಯನ್ನು ಉಂಟುಮಾಡಿತ್ತು. ಎಂದಿನಂತೆ ಅಪ್ಪನ ಕೋಣೆಯನ್ನು ಸೇರಿಕೊಂಡು ಅಪ್ಪನ ಹಳೆಯ ಫೈಲ್ ನ್ನು ಕೈಗೆತ್ತಿಕೊಂಡೆ. ಈಗಾಗಲೆ ಒಪ್ಪಿಕೊಂಡ ಪ್ರಾಚ್ಯವಸ್ತು ಸಂರಕ್ಷಣೆ ಇಲಾಖೆಯವರು ನೀಡಿದ ನಮ್ಮೂರಿನ ಹೊಳೆಯ ದಂಡೆಯ ಮೇಲಿರುವ ಹೆಸರಿಲ್ಲದೆ ಪಾಳು ಬಿದ್ದ ದೇವಾಸ್ಥಾನದ ಒಟ್ಟು ನೀಲಾ ನಕಾಶೆ, ಒಳಗೊಂಡಿರುವಂತಹ ಶಿಲ್ಪಗಳು, ಅವುಗಳ ಚಿತ್ರಗಳನ್ನು ಬರೆಯುವುದು, ಎಣಿಕೆ ಮತ್ತು ಅಂಕಿ ಅಂಶಗಳು ಒಟ್ಟು ದತ್ತಾಂಶ ಸಂಗ್ರಹ, ದೇವಾಸ್ಥಾನಕ್ಕೆ ಸಂಬಂದಿಸಿದ ಲಿಖಿತ ಹಾಳೆಗಳು, ತಾಮ್ರ ಪತ್ರಗಳು, ಶಿಲಾ ಶಾಸನಗಳು ಅವುಗಳು ಸಿಕ್ಕ ಜಾಗಗಳ ಮಾಜರಿ, ದೇವಾಸ್ಥಾನದ ಒತ್ತೂವರಿಯಾಗಿರುವಂತಹ ಜಾಗಗಳನ್ನು ಗುರುತಿಸುವುದು ಹೀಗೆ ಎಲ್ಲವೂ ಒಂದು ಹಂತಕ್ಕೆ ಬಂದು ನಿಂತಿದ್ದವು.

ಮೊದಲಿನಿಂದಲೂ ನಮ್ಮ ಮನೆತನದ ಕುಲ ಕಸುಬೇ ಶಿಲ್ಪಗಳನ್ನು ಕೆತ್ತುವುದು, ದೇವಾಸ್ಥಾನಗಳನ್ನು ನಿರ್ಮಾಣ ಮಾಡುವುದು ಆದುದ್ದರಿಂದ ಈ ದೇವಾಸ್ಥಾನಗಳ ನೀಲ ನಕಾಶೆಯನ್ನು ಬರೆಯುವುದು ಮತ್ತು ಶಿಲ್ಪಗಳ ಕರಾರುವಕ್ಕಾದ ಗುರುತಿಸುವಿಕೆ ಅವುಗಳ ಲಕ್ಷಣಗಳು, ಬಳಸಿದ ಕಲ್ಲುಗಳು ಗುರುತು ಪತ್ತೆ, ಅಂದಾಜು ಮಾದರಿಗಳನ್ನು ಪತ್ತೆ ಹಚ್ಚುವುದು ನನಗೆ ಅಷ್ಟೇನೂ ಕಷ್ಟವಾಗಲಿಲ್ಲ. ಆದರೆ ದತ್ತಾಂಶಗಳ ಸಂಗ್ರಹ ಮತ್ತು ಅವುಗಳನ್ನು ವಿಶ್ಲೇಷಣೆ ಮಾಡುವುದು ಸ್ವಲ್ಪ ನನ್ನ ಕೈಯನ್ನು ತಡೆಹಿಡಿಯುತಿತ್ತು ಅಷ್ಟೆ. ಅಲ್ಲಲ್ಲಿ ಸಿಕ್ಕ ಎಲ್ಲಾ ದಾಖಲೆಗಳನ್ನು ಗುಡ್ಡೆ ಹಾಕಿಕೊಂಡು ಹಿಂದೆ, ಮುಂದೆ ಏನು ಮಾಡಿದರೂ ಒಂದು ನಿರ್ಧಾರಕ್ಕೆ ಬರುವಲ್ಲಿ, ಅದರಲ್ಲೂ ಈ ದೇವಾಸ್ಥಾನ ಯಾರು ಕಟ್ಟಿದರೂ ಅನ್ನುವುದಕ್ಕಿಂತ ಈ ದೇವಾಸ್ಥಾನ ಏಕೆ ಹಾಳಾಯ್ತು ಯಾರಿಂದ ಮತ್ತು ಹೇಗೆ? ಎನ್ನುವುದೇ ಯಕ್ಷ ಪ್ರಶ್ನೆಯಾಗಿ ಕಾಡುತಿತ್ತು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಏಕೆಂದರೆ ಎತ್ತ ನೋಡಿದರು, ಹೇಗೆ ಗುಣಿಸಿ ಕಳೆದು ಕೂಡಿದರೂ ಇರುವ ದಾಖಲೆಗಳ ಪ್ರಕಾರ ಸರಿ ಸುಮಾರು 300 ನೂರು ವರ್ಷಗಳ ಹಿಂದಿನ ಕಟ್ಟಡ ಎನ್ನುವುದಷ್ಟೇ ಕಾಣುತ್ತದೆ ಹೊರತು, ಮತ್ತಾವ ಸುಳಿವು ಗೋಚರಿಸುತ್ತಿಲ್ಲವಲ್ಲ ಎಂದುಕೊಳ್ಳುತ್ತ ಹಣೆಯ ಮೇಲಿನ ಸುಕ್ಕುಗಳನ್ನು ಕೈ ಬೆರಳುಗಳಿಂದ ಒತ್ತಿಕೊಳ್ಳುತ್ತಿದ್ದರೆ ಅದೇನೋ ಒಂದು ರೀತಿಯ ಆನಂದ ನೋಡು ಎನ್ನುತ್ತಿದ್ದಾಗಲೆ ತಟ್ಟನೆ ಉಪಾಯವೊಂದು ಮಿಣಿಕಿತು..! ವೀರಾಚಾರ್ಯರು..! ಹೌದಲ್ಲ ಕೈಯಲ್ಲಿ ಬೆಣ್ಣೆಯನ್ನು ಇಟ್ಟುಕೊಂಡು ಊರೆಲ್ಲಾ ಹುಡಿಕಿದಂತಾಯಿತು, ತಕ್ಷಣ ಕಟ್ಟಿಗೆಯ ಪೆಟ್ಟಿಗೆಯಲ್ಲಿದ್ದ ಅಪ್ಪ ಕೊಟ್ಟಿದ್ದ ಅಜ್ಜನ ನೆನಪಿನ ಕೆಲವು ತಾಳೆ ಗರಿಗಳನ್ನು ಕಟ್ಟಿಟ್ಟಿದ್ದ ಕೆಂಪು ವಸ್ತ್ರದ ಆ ಬಟ್ಟೆಯ ಗಂಟನ್ನು ತೆಗೆದುಕೊಂಡವನೆ ಅವುಗಳನ್ನು ಭದ್ರವಾಗಿ ಕಂಕುಳದಲ್ಲಿ ಕಟ್ಟಿಕೊಂಡು ಅಟ್ಟದಿಂದ ಪಟಪಟನೆ ಕೆಳಗಿಳಿದು ನೇರವಾಗಿ ಜಾರುಗಲ್ಲಿನ ಮುಖಾಂತರ ಅಗಸಿ ಬಾಗಿಲು ದಾಟಿ ಕಲ್ಲೇಶ್ವರ ದೇವಾಸ್ಥಾನದ ಮುಂದಾಸಿ ಕಳಕನ ಓಣಿಯಲ್ಲಿ ವಾಸವಾಗಿದ್ದ ವೀರಾಚಾರ್ಯರ ಮನೆಯತ್ತ ನೆಡೆದೆ. ದಾರಿಯುದ್ದಕ್ಕೂ ಒಂದೇ ರಬಸ ಮತ್ತು ಕೊನೆಯ ಪ್ರಯತ್ನ ಎನ್ನುವಂತೆ ದಡ ದಡ ಹೆಜ್ಜೆ ಹಾಕುತ್ತಾ ನೇರವಾಗಿ ವೀರಾಚಾರಯರ ಮನೆಯ ಪೌಳಿಯ ಸಮೀಪ ಬಂದಿದ್ದೇ ತಡ, ನನಗೆ ಅರಿವಿಲ್ಲದಂತೆ ನನ್ನ ವೇಗ ತನ್ನಷ್ಟಕ್ಕೆ ತಾನೇ ಹತೋಟಿಗೆ ಬಂದಿತು. ವಿಶಾಲವಾದ ಮನೆಯ ಒಳ ಅಂಗಳ, ಅಂಗಳದಾಚೆ ಅರಮನೆಯಂತಹ ಮನೆ. ನಮ್ಮೂರಿಗಷ್ಟೇ ಅಲ್ಲದೆ ಸುತ್ತಮುತ್ತಲಿನ ಹತ್ತೂರಿಗೂ ಇವರ ಮನೆಯೆ ಅತ್ಯುತ್ತಮ ಗಾಳಿ ಬೆಳಕು ವಾಸ್ತು ವಿಚಾರಾದಿಯಾಗಿ ಅದ್ಭುತ ಕಟ್ಟಡ.

ಮನೆಯ ಹೆಬ್ಬಾಗಿಲ ಎಡ ಬಲಕ್ಕೆ ದೊಡ್ಡದಾದ ಕಲ್ಲಿನ ಕಟ್ಟೆಗಳು, ದೊಡ್ಡದಾದ ಕಟ್ಟಿಗೆಯ ಹೊಸಲನ್ನು ದಾಟಿ ಒಳ ಹೊಕ್ಕರೆ ವಿಶಾಲವಾದ ಹುಸಿ, ನಂತರ ಆಳು-ಕಾಳುಗಳು ಹಾಗೆ ಮುಂದುವರಿದರೆ ಮತ್ತೆ ಎತ್ತರದ ಬಾಗಿಲು ಅದರ ಎಡಬಲಕ್ಕೆ ಅಗಲವಾದ ಜಾಗ ಒಂದು ಕಡೆ ಹೊರಳು, ಬೀಸುವ ಕಲ್ಲು ಅನೇಕ ನೆಲುವುಗಳು ಇದ್ದರೆ, ಇನ್ನೊಂದು ಕಡೆಯಲ್ಲಿ ಎತ್ತರೆತ್ತರದ ಧಾನ್ಯಗಳನ್ನು ಸಂಗ್ರಹಿಸುವ ಬಾನಿಗಳು. ಆ ಮಧ್ಯದ ಬಾಗಿಲನ್ನು ಹೊಳ ಹೊಕ್ಕರೆ ಎಡಕ್ಕೆ ಅಡುಗೆ ಮನೆ ಬಲಕ್ಕೆ ಕೆಲವು ಕೋಣೆಗಳು ಬಾಗಿಲದ ನೇರಕ್ಕೆ ದೇವರ ಮನೆ. ಎಂತಹ ಅಚ್ಚುಕಟ್ಟಾದ ಚಂದದ ಮನೆ ಎಂದು ಅಂದಾಜಿಸುತ್ತಿದ್ದಾಗಲೆ ಯಾರದೂ ಯಾರು ಬಂದಿದ್ದು ಮರಿ ಶಿಲ್ಪಿ ಶ್ರೀನಿವಾಸ ಆಚಾರಿ ಅಲ್ವೆ? ಎನ್ನುತ್ತಿದ್ದಂತೆ ಹೌದು ಯಜಮಾನ್ರೆ ಶ್ರೀನಿವಾಸ ಆಚಾರಿ ಬಂದಿದ್ದೇನೆ, ತಮ್ಮ ಆರೋಗ್ಯ ವಿಚಾರಿಸಿಕೊಂಡು ಆರ್ಶೀವಾದ ತಗೊಂಡು ಹೋಗಲಿಕ್ಕೆ ಬಂದಿದ್ದೆ ಎನ್ನುತ್ತಿರುವಾಗಲೆ, ಸರಿ ಬಾ ಒಳ್ಳೆಯದೇ ಆಯಿತು, ನಿಮ್ಮಪ್ಪ ಇದ್ದಾಗ ಮಾಸದಲ್ಲಿ ಒಂದೊ ಎರಡೊ ಬಾರಿ ಈ ಕಡೆಗೆ ತಪ್ಪದೇ ಬರುತ್ತಿದ್ದ. ಅವನ ಹಣೆ ಬರಹ ಪುಣ್ಯ ಮಾಡಿದ್ದ ಅನಿಸುತ್ತೆ ಬೇಗ ನಮ್ಮನ್ನೆಲ್ಲ ಬಿಟ್ಟು ಹೋದ. ಕಲಾಕಾರ ಅಭಿನವ ಜಕ್ಕಣ್ಣ ಅವನು, ಇರಬೇಕಿತ್ತು ಇನ್ನು ನಾಲ್ಕು ಕಾಲ....., ಮಾಡಬೇಕಾಗಿದ್ದು ಇನ್ನೂ ಬಾಳ್ ಇತ್ತು......, ಕೈಗೆ ಬಂದ ತುತ್ತು ಬಾಯಿಗೆ ಬರದಾಂಗ ಆತು. ನಿರಾಶೆಯಲ್ಲಿ ಮಾತಾನಾಡುತ್ತಿದ್ದ ವೀರಾಚಾರ್ಯರ ನಿಟ್ಟುಸಿರಿನಲ್ಲಿ ಶತಮಾನದ ಅತೃಪ್ತಿ....! ಶತಮಾನಗಳು ಅಳಿದರೂ ಸರಿಪಡಿಸಾಲಾಗದ ಸತ್ಯವೊಂದರ ಮರೀಚಿಕೆಯ ನೋವು ಅವರ ಮೌನದಲ್ಲಿ ಇಣಿಕಿದ್ದು ಸ್ಪಷ್ಟವಾಗಿತ್ತು.

ಅದು ಇರ್ಲಿ ಬಿಡು, ಸುಮಾರು ಹದಿನೈದು ಇಪ್ಪತ್ತು ವರ್ಷಗಳೆ ಆಗಿರಬೇಕಲ್ಲ ನೀನು ಈ ಕಡೆಗೆ ಬಂದು..? ಆಗ ನಿಮ್ಮಪ್ಪನ ಜೊತೆಗೆ ಬರುತ್ತಿದ್ದಾವ.... ಅದೇ ಕೊನೆಯಲ್ವಾ..?. ಶಿಲ್ಪಿಗಾರಿಕೆ ಕಲಿಯಲಿಕ್ಕೆ ನಿನ್ನನ್ನು ನಿಮ್ಮಪ್ಪ ಹಂಪಿಗೆ ಕಳುಹಿಸುವ ಹಿಂದಿನ ದಿನ ನಮ್ಮ ಮನೆಗೆ ಬಂದಿದ್ದೆ ಕೊನೆ, ಮಧ್ಯದಲ್ಲಿ ಒಂದೆರಡು ಬಾರಿ ಊರಿಗೆ ಬಂದು ಹೋಗಿದ್ದೀ ಎನ್ನುವ ವಿಷಯ ಕೇಳಿದ್ದೆ. ಹೌದು ಯಜಮಾನ್ರೆ ಅದೇ ಕೊನೆ, ಪುನಃ ಇವತ್ತೆ ತಮ್ಮನ್ನ ಕಾಣಲಿಕ್ಕೆ ಬಂದಿದ್ದು.

ಹೇಳು ಏನು ಮಾಡಬೇಕು ಅಂದುಕೊಂಡಿದ್ದೀಯಾ....? ಮುಂದಿನ ಜೀವನಕ್ಕೆ. ಕುಲ ಕಸಬುನ್ನೇ......., ಅಂದರೆ ಅಪ್ಪನ ಜವಾಬ್ದಾರಿಯನ್ನು ಮುಂದುವರಿಸಬೇಕು ಅಂದುಕೊಂಡಿದ್ದೇನೆ ಯಜಮಾನ್ರೆ. ಏನು ನೀನೂ...., ನೀನೂ ಆ.. ! ಆ... ಜವಾಬ್ದಾರಿಯನ್ನು ಮುಂದುವರಿಸಬೇಕು ಅಂದುಕೊಂಡಿದ್ದೀಯಾ..! ಇದು ನಿನ್ನಿಂದ ಸಾಧ್ಯವೆ..? ನೀನಿನ್ನು ಎಳಸು, ನಿನ್ನನ್ನು ನೀನು ಏನು ಅಂದುಕೊಂಡಿದ್ದೀಯಾ? ಅಂತಹ ಹುಚ್ಚು ಹುಂಬತನ ಬೇಡ, ಅದು ನಿನ್ನಿಂದ ಸಾಧ್ಯವೂ ಇಲ್ಲ ಮತ್ತು ಹಿರೀಕನಾಗಿ ಹೇಳ್ತೀನಿ ಇದು ಸಾದುವೂ ಅಲ್ಲ. ಈ ನಿನ್ನ ತಿಳಿಗೇಡಿತನವನ್ನು ಇಲ್ಲಿಗೆ ಬಿಟ್ಟು ಬಿಡು, ಮತ್ತೆ ಪ್ರಳಯವಾದೀತು..! ಊರಿಗೆ ಊರೇ ನಾಶವಾದೀತು..! ನೀನಿನ್ನು ಹೊರಡು, ಏನಾದರು ಕಾಳು-ಕಡಿಯನ್ನು ತೆಗೆದುಕೊಂಡು ಹೋಗು, ಸಾಧ್ಯವಾದರೆ ಈ ಊರನ್ನೇ ಬಿಟ್ಟು ಹೋಗು..! ನಿನಗೆ ಒಳ್ಳೆಯದಾಗುತ್ತದೆ.

**ಭಾಗ-1**

ಏನು... ಎತ್ತಾ... ಎನ್ನುವ ಮೊದಲೇ ವೀರಚಾರ್ಯರು ತಮ್ಮ ತೋಗು ಕುರ್ಚಿಯಿಂದ ಎದ್ದು ಮನೆಯ ಹೊಳಗೆ ಹೊರಟು ಹೋದರು. ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ಶ್ರೀನಿವಾಸ ಆಚಾರಿ ಬೆಲ್ಲ ಮತ್ತು ಬೇಳೆಯನ್ನು ಕಟ್ಟಿಕೊಂಡು ತಾನು ತಂದಿದ್ದ ಅವರ ತಾತನ ತಾಳೆ-ತಾಮ್ರಾದಿ ಪತ್ರಗಳನ್ನು ಹೊತ್ತುಕೊಂಡು ಮನೆಯ ಕಡೆಗೆ ಹೊರಟು ಹೋದ.

ಅಂಕಿ ಅಂಶಗಳ ಹೊಂದಾಣಿಕೆಯ ಹಾವು-ಏಣಿ ಆಟ ಒಂದು ಕಡೆಯಾದರೆ, ವೀರಚಾರ್ಯರರ ಬಿರುಸು ನುಡಿಯ ಹಿಂದಿನ ಮರ್ಮವನ್ನು ಅರಿಯುವುದು ಇನ್ನೊಂದು ಕಗ್ಗಂಟಾಗಿ ಪರಿಣಮಿಸಿತು. ರಾತ್ರಿ ಎಷ್ಟು ಹೊತ್ತಾದರೂ ನಿದ್ರೆ ಬರಲಿಲ್ಲ, ತಕ್ಷಣ ಮೈಯೊಳಗೆ ಗಾಳಿ ಹೊಕ್ಕಂತೆ, ಮನೆಯಿಂದ ಹೊರ ಬಿದ್ದವನೆ, ಬರ ಬರನೆ ನೆಡೆಯುತ್ತ ಊರ ಆಚೆಗಿನ ಹೊಳೆಯ ದಂಡೆಯ ಮೇಲಿನ ದೇವಾಸ್ಥಾನದ ಕಡೆಗೆ ರಬಸದಿಂದ ಹೆಜ್ಜೆ ಹಾಕುತ್ತಾ ಹೊರಟವನ ತಲೆಯಲ್ಲಿ ಇದ್ದಿದ್ದೂ, ತಲೆಯನ್ನು ಇನ್ನಿಲ್ಲದಂತೆ ಕೊರೆಯತಿದ್ದ ಆ ದೇವಾಸ್ಥಾನದ ಕೆಲಸ ಒಂದು ಕಡೆಯಾದರೆ, ವೀರಾಚಾರ್ಯರರ ವರ್ತನೆ ಆಶ್ಚರ್ಯ ಮತ್ತು ಒಂದು ರೀತಿಯ ಅನುಮಾನವನ್ನು ಉಂಟುಮಾಡುತ್ತಿದ್ದಿದ್ದೂ ಸುಳ್ಳಲ್ಲ. ಜೊತೆಗೆ ಕಳೆದ ಆರೇಳು ತಿಂಗಳುಗಳಿಂದ ಕಾಡುತ್ತಿದ್ದ ಈ ಸ್ವಪ್ನ ಸುಂದರಿ ಬೇರೆ ಜೊತೆಯಾಗಿದ್ದಳು. ನನಗಂತೂ ಯಾಕಾಗಿಯಾದರೂ ಈ ಪುರಾತತ್ವ ಇಲಾಖೆಯವರ ಕೆಲಸವನ್ನು ಒಪ್ಪಿಕೊಂಡೆನೊ ಎನ್ನುವಂತಾಗಿದೆ ಎಂದುಕೊಳ್ಳುತ್ತಾ ನೇರವಾಗಿ ದೇವಾಸ್ಥಾನದ ಎದುರಿಗಿದ್ದ ಪೌಳಿಯ ಹೊರ ಬಾಗಿಲ ಮುಂದಿನ ಕಲ್ಲು ಹಾಸಿನ ಮೇಲೆ ಹಾಗೆ ಕುಳಿತುಕೊಂಡೆ.

ಸರಿ ಸುಮಾರು ಬೆಳಗಿನ ಮೂರು ಗಂಟೆಯಾಗಿರಬಹುದು, ಕತ್ತಲು ಸರಿಯುತ್ತಿತ್ತು ಆಗಸದೆತ್ತರದಲ್ಲಿ ಮುಂಬೆಳಕು ಪ್ರವಾಹೊಪಾದಿಯಲ್ಲಿ ಹರಿಯುತ್ತ ತನ್ನ ಕಿರಣಗಳನ್ನು ಹರಡುತಿತ್ತು, ನದಿಯಿಂದ ಎತ್ತರದ ಜಾಗೆಯಾಗಿದ್ದರಿಂದ ತಣ್ಣನೆ ಗಾಳಿ ನವಿರಾಗಿ ತೀಡುತ್ತಿತ್ತು, ನದಿಯೂ ಶಾಂತವಾಗಿ ಪ್ರಶಾಂತತೆಗೆ ಪೂರಕವಾಗಿತ್ತು, ಮೂಡಣ ನಿದಾನವಾಗಿ ಕೆಂಪೇರುತಿತ್ತು. ಅಲ್ಲಲ್ಲಿ ಹಕ್ಕಿಗಳ ಮುಮ್ಮೇಳ ಮೊಳಗಲು ಮುಂದಾಗುತಿತ್ತು, ಹಾಗೆ ಜಗತ್ತನ್ನೇ ಮರೆತಂತಾಗಿ ಹಗುರವಾಗುತಿದ್ದ ನನಗೆ ತಕ್ಷಣ ಮೈಮನಗೆಳೆಲ್ಲ ಜಾಗೃತವಾದಂತಾಗಿ ನನ್ನ ಹೆಗಲ ಮೇಲಿದ್ದ ಕೈಯನ್ನು ಗಮನಿಸುತ್ತಲೆ ಎದೆ ಜಲ್ಲ್ ಎಂದಿತು..! ಕುಳಿತಲ್ಲಿಂದಲೆ ಮಾರುದ್ದ ಜಿಗಿಯಬೇಕೆನ್ನಿಸಿತು, ಸಾವರಿಸಿಕೊಂಡು ನೋಡಿದರೆ ವೀರಾಚಾರ್ಯರು..! ತೊದಲುತ್ತಾ ಯಜಮಾನ್ರೆ ನೀವೂ....? ಅದು ಇಷ್ಟೊತ್ತಿನಲ್ಲಿ ಇಲ್ಲಿ....., ಹೆದರಿಕೊಂಡಿಯೇನು, ನಾನು ಪ್ರತಿದಿನ ಈ ಸಮಯಕ್ಕೆ ಇಲ್ಲಿಗೆ ಬಂದು ಸ್ನಾನಾದಿ ನಿತ್ಯ ಕರ್ಮಗಳನ್ನು ಮುಗಿಸಿ, ಧ್ಯಾನಿಸಿ ಇಲ್ಲಿಂದ ಹೊರಡುತ್ತೇನೆ.

ಈ ಹೊತ್ತಿನಲ್ಲಿ ಇಲ್ಲಿ ನೀನೇನು ಮಾಡುತ್ತಿದ್ದೀಯಾ? ನಿದ್ರೆ ... ಬರಲಿಲ್ಲವೆ? ಇಲ್ಲ ಯಜಮಾನ್ರೆ ಏಕೋ ಎಲ್ಲವೂ ಗೊಂದಲ ಗೋಜಲು ಗೋಜಲು ಎನ್ನಿಸುತ್ತಿದೆ. ಅದೇನಾ...., ನಾನು ನಿನ್ನೆ ನಿನ್ನ ಜೊತೆ ಸ್ವಲ್ಪ ಕಠೊರವಾಗಿ ಮಾತನಾಡಿದ್ದನ್ನು ಮನಸ್ಸಿಗೆ ಹಚ್ಚಿಕೊಂಡೀಯಾ? ನೋಡು ನಾನು ಆ ರೀತಿ ಹೇಳಿದ್ದು ಸರಿಯಾಗಿಯೇ ಇದೆ, ನಿನ್ನ ಒಳ್ಳೆಯದಕ್ಕೆ ನಾನು ಹೇಳಿದ್ದು, ನೀನು ಅದರ ಬಗ್ಗೆ ಹೆಚ್ಚಿಗೆ ಯೋಚಿಸುವ ಅಗತ್ಯವಿಲ್ಲ, ಸಾಧ್ಯವಾದರೆ ಈ ಕೆತ್ತನೆಯ ಕಸಬನ್ನು ಬಿಟ್ಟು ನಿನ್ನ ಜೀವನೋಪಾಯಕ್ಕಾಗಿ ಬೇರೆ ಏನಾದರೂ ಕೆಲಸವೊಂದನ್ನು ನೋಡಿಕೊಳ್ಳುವುದು ಲೇಸು ಎನಿಸುತ್ತದೆ. ಹಾಂ... ಇದರಲ್ಲಿ ಎಲ್ಲರ ಕಲ್ಯಾಣ ಅಡಗಿದೆ ಎನ್ನುವುದನ್ನು ಮರೆಯಬೇಡ.

ಯಜಮಾನ್ರೆ ನಿಮ್ಮ ಮಾತಿನ ಮೇಲೆ ನನಗೆ ಸಂಪೂರ್ಣ ಗೌರವ ಎದೆ ಆದರೆ ನನ್ನ ಮನಸ್ಸಿನ ಗೊಂದಲವನ್ನಾದರೂ ತಿಳಿಗೊಳಿಸಿಕೊಳ್ಳಬೇಕಲ್ಲ. ಒಂದು ಕಡೆಗೆ ನನ್ನ ಬುದ್ದಿಮತ್ತೆಗೆ ಸವಾಲೆಸುವಂತಹ ಈ ದೇವಾಸ್ಥಾನದ ಗತ ಇತಿಹಾಸವಾದರೆ, ಮತ್ತೊಂದು ಕಡೆಯಲ್ಲಿ ಕಳೆದ ಆರೇಳು ತಿಂಗಳುಗಳಿಂದ ನನ್ನ ನಿದ್ರೆಗೆ ಭಂಗ ತರುತ್ತಿರುವ ಆ ಸ್ವಪ್ನ ಸುಂದರಿ. ಏನು...! ಸ್ವಪ್ನ ಸುಂದರಿಯೇ ...? ಏನು ಹಾಗೆಂದರೆ, ಯಾರವಳು..? ನಿನ್ನ ನಿದ್ರೆಯನ್ನೇಕೆ ಹಾಳು ಮಾಡುತ್ತಿರುವಳು. ಏನಿಲ್ಲ ಯಜಮಾನ್ರೆ ಈ ಪ್ರಾಚ್ಯವಸ್ತು ಇಲಾಖೆಯವರ ಕೆಲಸವನ್ನು ಕೈಗೆತ್ತಿಕೊಂಡಾಗಿನಿಂದಲೂ ಒಂದಲ್ಲ ಒಂದು ಸಮಸ್ಯೆಗಳು ಎದುರಾಗುತ್ತಿವೆ, ನನ್ನೀ ಕೆಲಸದ ಕೊನೆ ಮೊದಲುಗಳೆ ತಿಳಿಯದಾಗಿದೆ. ಈ ಎಲ್ಲಾ ಗೊಂದಲಗಳಿಗೆ ನಿಮ್ಮ ಬಳಿ ಮಾತ್ರ ಪರಿಹಾರ ಸಿಗಬಹುದು ಎಂದುಕೊಂಡೆ ನಿನ್ನೆ ನಿಮ್ಮ ಬಳಿ ಬಂದಿದ್ದೆ. ಅರ್ಥವಾಯಿತು ನನಗೆ, ನಿನಗೇನಾದರೂ ತಿಳಿಯಿತೆ...? ಈಗಲಾದರೂ ತಿಳಿದಿರಬೇಕಲ್ಲವೆ, ಇದೆಲ್ಲ ನಿನ್ನಿಂದಾಗದು ಎನ್ನುವ ಸತ್ಯ..! ಸತ್ಯ..! ಯಾವುದು ಸತ್ಯ ಯಜಮಾನ್ರೆ..? ಏಕೆ ತಮಗೆ ನಮ್ಮ ಕುಲ ಕಸುಬಿನ ಬಗ್ಗೆ ಸಂಶಯವೆ? ಅಥವಾ ನಿಮ್ಮ ಸ್ನೇಹಿತನ ಮಗ, ಜಕ್ಕಣ್ಣನ ಮಗನಾದ ಈ ಶ್ರೀನಿವಾಸನ ವಂಶದ ಬಗ್ಗೆಯೇ ಅಪನಂಬಿಕೆ ಏನಾದರೂ.... ಇದ್ದರೆ ಹೇಳಿ ಬಿಡಿ. ಇಂದಿನಿಂದ ನಾನು ಈ ಉಳಿ ಮತ್ತು ಸುತ್ತಿಗೆಯನ್ನು ಮತ್ತಾವತ್ತೂ ಮುಟ್ಟುವುದಿಲ್ಲ ಎಂದು ಈ ತುಂಗೆಯ ಮೇಲೆ ಆಣೆ ಮಾಡುತ್ತೇನೆ. ಇಲ್ಲ ಎನ್ನುವುದಾದರೆ ಹೇಳಿ ಯಜಮಾನ್ರೆ ನಿಮ್ಮನ್ನು ಹೊರತು ಪಡಿಸಿ ಮತ್ತಾರ ಬಳಿಯೂ ನನ್ನ ಸಮಸ್ಯೆಗೆ ಪರಿಹಾರ ಗೊಚರಿಸದು. ಎನ್ನುತ್ತಿದ್ದಾಗಲೆ ವೀರಚಾರ್ಯರು ಕೈ ಕಾಲುಗಳು ನಡುಗುತ್ತಿರುವುದು, ಅವರ ಕೆನ್ನೆಗಳು ಅದುರುತ್ತಿರುವುದು ಆ ಮಂದಬೆಳಕಿನಲ್ಲೂ ಸ್ಪಷ್ಟವಾಗಿ ಗೊಚರಿಸುತ್ತಿತ್ತು, ಹಾಗೆ ವೀರಚಾರ್ಯರರು ಕುಸಿದು ಬಿಟ್ಟರು. ತಕ್ಷಣ ಅವರನ್ನು ತನ್ನ ತೋಳಿನ ಸಹಾಯದೊಂದಿಗೆ ದೇವಾಸ್ಥಾನದ ಮುಂದಿನ ಆಲದ ಕಟ್ಟೆಗೆ ಕೂಡಿಸಿ ಮಾತನಾಡಿಸುತ್ತ ಯಜಮಾನ್ರೆ ಏಕೆ ಏನಾಯ್ತು.. ಏನಾದರೂ ತೊಂದರೆಯೆ..? ನನ್ನಿಂದೇನಾದರು ತಪ್ಪಾಯಿತೆ ನೂರ ಹದಿನೇಳು ವರ್ಷ ನಿಮಗೆ ಈ ಇಳಿ ವಯಸ್ಸಿನಲ್ಲಿ ನೀವು ಇಲ್ಲಿಯ ವರೆಗೆ ಬರಬಾರದಿತ್ತು ಎನ್ನುವಾಗ ಅವನನ್ನು ತಡೆದ ವೀರಚಾರ್ಯರರು, "ಬರಬೇಕಲ್ಲ ಮಗು ಹೆಗಲ ಹೊರೆಯನ್ನು ಕಳೆದುಕೊಳ್ಳಲು..!" ಎನ್ನುತ್ತಾ ಆ ದೇವಾಸ್ಥಾನದ ಬಾಗಿಲನ್ನು ತೋರಿಸುತ್ತಾ... ಇದು ದೇವಾಸ್ಥಾನವಲ್ಲ, ಸಾವಿನ ಮನೆ..! ಅದೊ ಅಲ್ಲಿದೆಯಲ್ಲ "ಗರ್ಭಗುಡಿ" ಅದು ಅಂತಿಂತ ಗರ್ಭವಲ್ಲ ಸೂತಕ ಹೊತ್ತ ಬರಡು ಗರ್ಭ, ಬಯದ ಗರ್ಭ, ಅದೂ ಬಯಲು ಗರ್ಭ..! ಎಲ್ಲಿದೆ ದೇವಾಸ್ಥಾನ, ನಾಲ್ಕು ಕಲ್ಲಿನ ಕಂಬಗಳನ್ನು ನಿಲ್ಲಿಸಿದರೆ ಅದು ಗುಡಿಯಾಗಬಲ್ಲದೆ, ಮುಗ್ದ ಮನಸ್ಸುಗಳನ್ನು ಹಡೆಯಬಲ್ಲದೆ, ಜಗತ್ತಿಗೆ ಹರಡಬಲ್ಲದೆ? ಶ್ರದ್ದೆ ಭಕ್ತಿಗಳಿಲ್ಲದ, ಪ್ರೀತಿ ಪ್ರೇಮಗಳಿಲ್ಲದೆ ಆಲಯವನ್ನು ಕಟ್ಟಲು ಸಾಧ್ಯವೆ? ಇದು ಹಮ್ಮು ಬಿಮ್ಮಿಗೆ, ಮನುಷ್ಯನ ಅಹಂಗೆ ಅವನ ಅಹಂಕಾರಕ್ಕೆ ಕಟ್ಟಿ ಹೊರಟ ಅರಮನೆ, ಇದು ಪ್ರೀತಿ ಪ್ರೇಮಗಳ ಅಡಿಪಾಯಕ್ಕೆ ಉಳಿಯನ್ನಿಟ್ಟು ಮನುಶ್ಯತ್ವಕ್ಕೆ ಬೆಂಕಿ ಇಟ್ಟ ಅರಗಿನ ಮನೆ..! ಹಾಗೆ ನಂದಿದ್ವಜದ ಕಲ್ಲಿನ ಕಂಬಕ್ಕೆ ಒರಗಿ ಕುಳಿತ ವೀರಚಾರ್ಯರರು ನೋವಿನಿಂದ ಕಣ್ಣುಗಳನ್ನು ಮುಚ್ಚುತ್ತಾರೆ, ಕಣ್ಣಂಚಿನಿಂದ ನೀರು ದಾರೆಯಾಗುತ್ತದೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**09–09–2024 – ಸೋಮವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ವಿಶಾಖ |
| ಯೋಗ | : ವೈಧೃತಿ |
| ಕರಣ | : ಕೌಳವ |
| ಸೂರ್ಯೋದಯ | : 06:12:48 |
| ಸೂರ್ಯಾಸ್ತ | : 18:35:04 |
| ರಾಹು ಕಾಲ | : 17:03–18:36 |
| ಯಮಘಂಡ ಕಾಲ | : 12:24–13:57 |
| ಗುಳಿಕ ಕಾಲ | : 15:30–1703 |

## ತುಂಗಭದ್ರಾ ನೀರಿನ ಮಟ್ಟ



ಭಾನುವಾರ : 08–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 34983 ಕ್ಯುಸೆಕ್ |
| ಹೊರ ಹರಿವು | 34743 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1623.38 ಅಡಿ |
| ಒಳ ಹರಿವು | 1629 ಕ್ಯುಸೆಕ್ |
| ಹೊರ ಹರಿವು | 9877 ಕ್ಯುಸೆಕ್ |
| ಸಾಮರ್ಥ್ಯ | 71.327 ಟಿಎಂಸಿ |

# ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಆರೋಗ್ಯ ವಿಚಾರಿಸಿದ ಸಚಿವ

### ಸಚಿವ ಎನ್‌ಎಸ್ ಬೋಸರಾಜು ಹೇಳಿಕೆ | ಹೆಚ್ಚಿನ ಪರಿಹಾರಕ್ಕಾಗಿ ಸಿಎಂ ಜೊತೆ ಮಾತನಾಡಿದ್ದೇನೆ

**ಹಂಪಿ ಟೈಮ್ಸ್ ರಾಯಚೂರು**

ಮಾನ್ವಿ ಲಯೋಲಾ ಶಾಲೆಯ ಬಸ್ ಹಾಗೂ ಸರಕಾರಿ ಬಸ್ ನಡುವೆ ಕಪಗಲ್ ಕ್ರಾಸ್ ಬಳಿ ನಡೆದ ಅಪಘಾತದಲ್ಲಿ ಹಲವಾರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡು ರಿಮ್ಸ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ದರಿಂದ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವರಾದ ಬೋಸರಾಜು ಅವರು ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ, ಯೋಗಕ್ಷೇಮವನ್ನು ವಿಚಾರಿಸಿದರು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರತಿಯೊಬ್ಬ ಮಕ್ಕಳನ್ನು ಸಚಿವರು ಮಾತನಾಡಿಸಿ ಕುಶಲೋಪರಿ ವಿಚಾರಿಸಿದರು. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಹೆಚ್ಚಿನ ಚಿಕಿತ್ಸಾ ಸೌಲಭ್ಯ ವಿರುವ ಆಸ್ಪತ್ರೆಗಳಿಗೆ ಮಕ್ಕಳನ್ನ ವರ್ಗಾಯಿಸುವಂತೆ ವೈದ್ಯಾಧಿಕಾರಿಗಳೊಂದಿಗೆ ಮಾತನಾಡಿದರು. ಮಕ್ಕಳನ್ನು ಜಾಗರೂಕತೆ ಯಿಂದ ವೈದ್ಯರು ಚಿಕಿತ್ಸೆಯನ್ನು ನೀಡಬೇಕೆಂದು ಅಧಿಕಾರಿಗಳಿಗೆ ಹಾಗೂ ವೈದ್ಯರಿಗೆ ತಿಳಿಸಿದರು.

ಈಗಾಗಲೆ ಕೆಎಸ್ ಆರ್ ಟಿಸಿ ಯಿಂದ ಅಪಘಾತದಲ್ಲಿ ಮೃತಪಟ್ಟ ಮಕ್ಕಳಿಗೆ ತಲಾ 5 ಲಕ್ಷ ಪರಿಹಾರ ನೀಡಲಾಗಿದೆ. ಸರ್ಕಾರದಿಂದ ಇನ್ನು ಹೆಚ್ಚಿನ ಪರಿಹಾರಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯಅವರೊಂದಿಗೆಮಾತನಾಡಿದ್ದೇನೆ. ಗಾಯಗೊಂಡ ಮಕ್ಕಳಿಗೆ ಸಂಪೂರ್ಣ ಚಿಕಿತ್ಸೆ ನೀಡುವಂತೆ ತಿಳಿಸಲಾಗಿದೆ. ಗಾಯಗೊಂಡ ಮಕ್ಕಳಿಗೂ ಪರಿಹಾರ ಕೊಡಿಸಲು ಪ್ರಯತ್ನಸಲಾಗುವುದು ಎಂದು ಮಾಧ್ಯಮದವರೊಂದಿಗೆ ಮಾತನಾಡಿದರು.



ನಂತರ ಅಪಘಾತದಲ್ಲಿ ಗಾಯಗೊಂಡ ಕೆ ಮಕ್ಕಳನ್ನು ನಗರದ ಖಾಸಗಿ ಆಸ್ಪತ್ರೆಯಾದ ಸುರಕ್ಷಾ ಆಸ್ಪತ್ರೆಯಲ್ಲಿ ದಾಖಲಿಸಿದ ಹಿನ್ನಲೆ ಸುರಕ್ಷಾ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯದ ಕುರಿತು ವಿಚಾರಿಸಿದರು. ವೈದ್ಯರು ಸಚಿವರಿಗೆ ಮಕ್ಕಳ ಕುರಿತು ವಿವರಿಸಿದರು.

ಕಾಂಗ್ರೆಸ್ ಮುಖಂಡರಾದ ಜಯಣ್ಣ, ಕೆ ಶಾಂತಪ್ಪ, ಜಿಂದಪ್ಪ, ನಗರಸಭೆ ಉಪಾಧ್ಯಕ್ಷ ಸಾಜಿದ್ ಸಮೀರ್, ನರಸಿಂಹಲು ಮಾಡಗಿರಿ, ನಿರ್ಮಲಾ ಬೆಣ್ಣಿ, ರುದ್ರಪ್ಪ ಅಂಗಡಿ, ಬಸವರಾಜ ಪಾಟೀಲ್ ಅತ್ತನೂರು, ರಿಮ್ಸ್ ಡೀನ್ ರಮೇಶ್, ಡಾ. ಬಸವರಾಜ ಸೇರಿದಂತೆ ಅನೇಕರಿದ್ದರು.

# ರಿಂಗ್‌ರೋಡ್ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಭಾನುವಾರ ನಗರದ ಹೊರವಲಯಕ್ಕೆ ಭೇಟಿ ನೀಡಿ ರಿಂಗ್ ರೋಡ್ ನಿರ್ಮಾಣದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದರು.

ಶಾಸಕ ಹೆಚ್.ಆರ್.ಗವಿಯಪ್ಪ ಅವರೊಂದಿಗೆ ಸಂಚಾರ ಕೈಗೊಂಡು ರಾಷ್ಟ್ರೀಯ ಹೆದ್ದಾರಿ 50ರಿಂದ ಹೊಸಪೇಟೆ ನಗರಕ್ಕೆ ಸಂಪರ್ಕಕ್ಕೆ ಅಗತ್ಯವಿರುವ ರಿಂಗ್ ರೋಡ್ ಮಾರ್ಗದ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಹೊಸಪೇಟೆ ತಹಸೀಲ್ದಾರರಾದ ಶೃತಿ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಇದ್ದರು.



# ಕೃಷಿ ಭಾಗ್ಯ ಯೋಜನೆ ಸಹಾಯಧನ ಸೌಲಭ್ಯ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಸ್ತುತ ವರ್ಷದಲ್ಲಿ ಜಿಲ್ಲೆಯ ಒಟ್ಟು 6 ತಾಲ್ಲೂಕುಗಳಲ್ಲಿ ರಾಜ್ಯ ವಿಪತ್ತು ನಿರ್ವಹಣಾ ನಿಧಿ ಹಾಗೂ ಕೃಷಿ ಭಾಗ್ಯ ಯೋಜನೆಯನ್ನು ಸಾಮಾನ್ಯ ವರ್ಗದ ರೈತರಿಗೆ 80 ರಷ್ಟು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ 90 ರಷ್ಟು ಸಹಾಯಧನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಸಹಾಯಧನ: ಕ್ಷೇತ್ರ ಬದು ನಿರ್ಮಾಣದಲ್ಲಿ ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ನೀರು ಸಂಗ್ರಹಣಾ ರಚನೆಗೆ (ಕೃಷಿ ಹೊಂಡ) ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ನೀರು ಇಂಗದಂತೆ ತಡೆಯಲು ಪಾಲಿಥೀನೊಂದಿಕೆ (ಗರಿಷ್ಠ–ರೂ 50000 ಸಾಮಾನ್ಯರಿಗೆ 80 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಾಣಕ್ಕೆ ಸಾಮಾನ್ಯರಿಗೆ 40 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 50 ರಷ್ಟು ಸಹಾಯಧನ ನೀಡಲಾಗುವುದು. ಹೊಂಡದಿಂದ ನೀರು ಎತ್ತಲು ಡೀಸೆಲ್, ಪೆಟ್ರೋಲ್, ಸೋಲಾರ್ಪಂಪ್ಸೆಟ್ ನಿರ್ಮಾಣಕ್ಕೆ ಸಾಮಾನ್ಯರಿಗೆ 50 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ನೀರನ್ನು ಬೆಳಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ) ನೀರಾವರಿ ನಿರ್ಮಾಣಕ್ಕೆ ಸಾಮಾನ್ಯರಿಗೆ 90 ರಷ್ಟು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 90 ರಷ್ಟು ಸಹಾಯಧನ ನೀಡಲಾಗುವುದು. ಅರ್ಜಿ ನಮೂನೆಯನ್ನು ಸಂಬಂಧಿಸಿದ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಪಡೆದು ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ದೇಶಗಳು: ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಗೆ ಭೇಟಿ ನೀಡಿ ಸಂಪರ್ಕಿಸಿ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

ಹಂಪಿ ಟೈಮ್ಸ್
SSLC ಮಾರ್ಗದರ್ಶಿ
Academic Year 2024/2025
ಈ ಬಾರಿ ಫಲಿತಾಂಶ ನಮ್ಮದೆ









ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಈ ಬಾರಿ ಶೇ.100ರಷ್ಟು ಅಂಕಗಳಿಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ವಿಜಯನಗರ ಜಿಲ್ಲೆಯ ವಿಷಯವಾರು ನುರಿತ ಮಾರ್ಗದರ್ಶಿ ಶಿಕ್ಷಕರಿಂದ ಸಿದ್ಧಗೊಂಡ ಪ್ರಶ್ನೋತ್ತರ ಸರಣಿಯನ್ನು ಈ ಬಾರಿ ಫಲಿತಾಂಶ ನಮ್ಮದೆ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ನಿತ್ಯ ಪ್ರಕಟಿಸಲಾಗುತ್ತಿದೆ. ವಿದ್ಯಾರ್ಥಿಗಳು ಪ್ರತಿನಿತ್ಯ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವಾರು ಪ್ರಶ್ನೋತ್ತರಗಳನ್ನು ಅಂದೇ ಬರೆದಿಟ್ಟುಕೊಂಡು ನಿರಂತರ ಅಭ್ಯಾಸ ಮಾಡಿದರೆ ಹೆಚ್ಚು ಅಂಕಗಳಿಕೆ ನಿಶ್ಚಿತ. ಎಸ್ಸೆಸ್ಸೆಲ್ಸಿ ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಸಹ ಹಂಪಿ ಟೈಮ್ಸ್ ಮಾರ್ಗದರ್ಶಿ ಅಭ್ಯಾಸ ಮಾಡಿ ತಮ್ಮ ಕನಸನ್ನು ಸಾಕರಗೊಳಿಸಿಕೊಳ್ಳಬಹುದು.

ಸುಲಭ ಮಾರ್ಗೋಪಾಯಗಳು

- ಪ್ರತಿದಿನ ಬರೆದು, ಓದುವೆ ಎಂಬುದು ಮೊದಲ ಗುರಿಯಾಗಲಿ
- ಬರೆದು ಓದುವ ಅಭ್ಯಾಸ ರೂಢಿಸಿಕೊಳ್ಳಿ
- ಓದುವಾಗ ಮೊದಲು ಕಂಠಪಾಠ ಮಾಡಬಾರದು
- ಟೆಸ್ಟ್ ಪರೀಕ್ಷೆಯಲ್ಲಿ ಎಂದಿಗೂ ಯಾವುದೇ ಪ್ರಶ್ನೆಗಳನ್ನು ಬಿಡಬೇಡಿ
- ಕಳೆದ ವರ್ಷಗಳಲ್ಲಿ ಕೇಳಿದ ಪ್ರಶ್ನೆಗಳನ್ನು ಹೆಚ್ಚು ಅಭ್ಯಾಸ ಮಾಡಿ
- ಪುಸ್ತಕಗಳಲ್ಲಿನ ಪಠ್ಯವನ್ನು ಸಂಪೂರ್ಣವಾಗಿ ಓದಿರಿ.
- ಗೊಂದಲಗಳಿದ್ದಲ್ಲಿ ನಿಮ್ಮ ವಿಷಯವಾರು ಶಿಕ್ಷಕರನ್ನು ಕೇಳಿ ಪರಿಹರಿಸಿಕೊಳ್ಳಿ









CONTACT US
94486 33038
www.hampitimes.com / https://epaper.hampitimes.com
ನಿನ್ನ ಏಳ್ಗೆಗೆ ನೀನೇ ಶಿಲ್ಪಿ
scan to read

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

## ಅಧ್ಯಾಯ: 4 ಮೈಸೂರು ಒಡೆಯರು ಮತ್ತು ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಯ ಪ್ರತಿರೋಧಗಳು

| ಯುದ್ಧಗಳು | ಒಪ್ಪಂದ |
|---|---|
| 1ನೇ ಆಂಗ್ಲೋ–ಮೈಸೂರು ಯುದ್ಧ | ಮದ್ರಾಸ್ ಒಪ್ಪಂದ |
| 2ನೇ ಆಂಗ್ಲೋ–ಮೈಸೂರು ಯುದ್ಧ | ಮಂಗಳೂರು ಒಪ್ಪಂದ |
| 3ನೇ ಆಂಗ್ಲೋ–ಮೈಸೂರು ಯುದ್ಧ | ಶ್ರೀರಂಗಪಟ್ಟಣ ಒಪ್ಪಂದ |

**1). ಅಠಾರ ಕಚೇರಿಯನ್ನು ಸ್ಥಾಪಿಸಿದವರು ಯಾರು?**
ಉತ್ತರ;–ಚಿಕ್ಕದೇವರಾಜ ಒಡೆಯರು

**2).ಅಭಿನವ ಕಾಳಿದಾಸ ಎಂದು ಕರೆಯಿಸಿಕೊಂಡವರು ಯಾರು?**
ಉತ್ತರ;–ಬಸಪ್ಪ ಶಾಸ್ತ್ರಿ

**3).ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ಆರಂಭಿಸಿದವರು ಯಾರು?**
ಉತ್ತರ;– ರಾಜ ಒಡೆಯರು

**4).ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳೇನು?**
ಉತ್ತರ;–1 ಶ್ರೀರಂಗಪಟ್ಟಣ ಒಪ್ಪಂದಕ್ಕೆ ಟಿಪ್ಪು ಸಹಿ ಹಾಕಿದನು
2 ಟಿಪ್ಪು ತನ್ನ ಅರ್ಧ–ರಾಜ್ಯವನ್ನು ಬಿಟ್ಟು ಕೊಡುವುದು
3 ಯುದ್ಧ ನಷ್ಟ ಪರಿಹಾರವಾಗಿ 3 ಕೋಟಿ ರೂಪಾಯಿ ಕೊಡು ವುದು ಮತ್ತು ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ನೀಡುವುದು
4 ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು

**5) ಚಿಕ್ಕದೇವರಾಜ ಒಡೆಯರ ಸಾಧನೆಗಳನ್ನು ವಿವರಿಸಿರಿ**
ಉತ್ತರ;– ಸಮರ್ಥ ಯೋಧ ಮತ್ತು ದಕ್ಷ ಆಡಳಿತಗಾರರಾಗಿದ್ದರು
* ಶಿವಾಜಿಯ ಸೇನೆಯನ್ನು ಸೋಲಿಸಿದರು
* ಮಾಗಡಿ,ಮಧುಗಿರಿ,ಕೊರಟಗೆರೆ ವಶಪಡಿಸಿಕೊಂಡರು
* ಬೆಂಗಳೂರನ್ನು ಮೊಘಲರಿಂದ ಕೊಂಡರು
* ಅಠಾರಾ ಕಚೇರಿ ಸ್ಥಾಪನೆ,.ಅಂಚೆ ಇಲಾಖೆ ಸ್ಥಾಪನೆ
* ಕಾವೇರಿ ನದಿಗೆ 2 ಕಾಲುವೆ ನಿರ್ಮಾಣ ಮಾಡಿದ್ದಾರೆ
* ಕವಿ, ಪಂಡಿತರಿಗೆ ಆಶ್ರಯ ನೀಡಿದ್ದರು.
* ಕವಿಚಕ್ರವರ್ತಿ, ನವಕೋಟಿ ನಾರಾಯಣ ಬಿರಿದು ಧರಿಸಿದ್ದರು.

**6) ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸಿ / ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ರಾಜ್ಯ' ಎನಿಸಿಕೊಂಡಿತು ಹೇಗೆ?**
ಉತ್ತರ;– 1 .ಪ್ರಾಥಮಿಕ ಶಾಲೆಗಳ ಶುಲ್ಕ ರದ್ದು ಮಾಡಿದರು
2 ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವು ನೀಡಿದರು
3. ಶಿವನಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರ ಸ್ಥಾಪನೆ
4 ಕೋಲಾರದಲ್ಲಿ ಚಿನ್ನದ ಗಣಿ ಮತ್ತು ಬೆಂಗಳೂರಿಗೆ ವಿದ್ಯುತ್ ಸರಬರಾಜು ಮಾಡಿದರು
5 .ಮೈಸೂರು ವಿಶ್ವವಿದ್ಯಾನಿಲಯವನ್ನು ಆರಂಭಿಸಿದರು
6 ಕಾವೇರಿ ನದಿಗೆ ಅಣೆಕಟ್ಟು ಕಟ್ಟಿಸಿದರು
7 ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು
8 ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದರು
9 ಮೈಸೂರನ್ನು 'ಮಾದರಿ ರಾಜ್ಯ'ವನ್ನಾಗಿ ಮಾಡಿದರು
10 ಗಾಂಧೀಜಿಯವರು ಇವರನ್ನು ರಾಜಶ್ರೀ ಎಂದು ಕರೆದರು

**7) ದಿವಾನರಾಗಿ ಕೆ. ಶೇಷಾದ್ರಿ ಅಯ್ಯರ್ ಸಾಧನೆಗಳನ್ನು ವಿವರಿಸಿ (ಏಪ್ರಿಲ್–2024)**
ಉತ್ತರ;– 1. ಹೊಸ ರೈಲುಮಾರ್ಗಗಳ ನಿರ್ಮಾಣ
2. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಿದರು.
3. 'ಶಿಶುವಿವಾಹ' ನಿಷೇಧ ಕಾಯಿದೆ ಜಾರಿ. (1894ರಲ್ಲಿ)
4. ಶಿಂಷಾ ಜಲವಿದ್ಯುತ್ ಯೋಜನೆ ಆರಂಭ.
5. ನೀರಾವರಿಗೆ ಮನ್ನಣೆ.
6. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಗಮನ,
7. ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆ ಸ್ಥಾಪನೆ

**8) ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಏಕೆ?**
ಉತ್ತರ;– 1 ಮೊಘಲ್ ಚಕ್ರವರ್ತಿ ಔರಂಗಜೇಬ್ನ ಮರಣ
2. ಮೊಘಲರ ದುರ್ಬಲರಾದರು
3. ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟಗಳು
4. ಮೈಸೂರಿನಲ್ಲಿ ಚಿಕ್ಕದೇವರಾಜ ಒಡೆಯರ ಮರಣ
5. ಮೈಸೂರಿನಲ್ಲಿ ಆಡಳಿತ ಕುಸಿಯಿತು
6. ಹೈದರಾಲಿ ರಾಜಕೀಯ ಪ್ರಾಮುಖ್ಯತೆಯನ್ನು ಗಳಿಸಿದನು.

**9). ಕಿತ್ತೂರು ಚೆನ್ನಮ್ಮ ಇಂದಿಗೂ ಕೂಡ ನಾಡಿಗೆ ಆದರ್ಶಪ್ರಾಯಳಾಗಿದ್ದಾಳೆ. ಈ ಹೇಳಿಕೆಯನ್ನು ಸಮರ್ಥಿಸಿ**
ಉತ್ತರ;– 1 ಚೆನ್ನಮ್ಮ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದಳು ತಾನೇ ಆಡಳಿತವನ್ನು ಪ್ರಾರಂಭಿಸಿದಳು.
3. ಬ್ರಿಟಿಷರ ಥ್ಯಾಕರೆ 'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ'ಯಂತೆ ಕಿತ್ತೂರನ್ನು ವಶಪಡಿಸಿಕೊಳ್ಳಲು ಯತ್ನಿಸಿದನು
4. ಖಜಾನೆ, ಕೋಟೆಗಳನ್ನು ವಶಕ್ಕೆ ಪಡೆದನು.
5. ಯುದ್ಧದಲ್ಲಿ ಥ್ಯಾಕರೆ ಗುಂಡೇಟಿಗೆ ಬಲಿಯಾದನು
6. ಆದರೆ ಬ್ರಿಟಿಷ್ ಸೈನ್ಯ ಮತ್ತೊಮ್ಮೆ ಕಿತ್ತೂರಿಗೆ ಮುತ್ತಿಗೆ ಹಾಕಿತು.
7. ಚೆನ್ನಮ್ಮನನ್ನು ಸೆರೆಹಿಡಿದು ಬೈಲಹೊಂಗಲದಲ್ಲಿ ಇರಿಸಲಾಯಿತು
8. ಕಿತ್ತೂರು ಬ್ರಿಟಿಷರ ವಶವಾಯಿತು.

**10).ಕಿತ್ತೂರಿನ ಚೆನ್ನಮ್ಮನೊಂದಿಗೆ ಸಂಗೊಳ್ಳಿಯ ರಾಯಣ್ಣನ ಹೆಸರು ಅಜರಾಮರ ಮತ್ತು ಆದರ್ಶಪ್ರಾಯವೆನಿಸಿದೆ ಹೇಗೆ? (ಸೆಪ್ಟಂಬರ್ 2022)**
ಉತ್ತರ;– 1. ಸಂಗೊಳ್ಳಿಯ ರಾಯಣ್ಣ ಕಿತ್ತೂರಿಗಾಗಿ ಹೋರಾಡುವುದು ತನ್ನ ಕರ್ತವ್ಯವೆಂದು ಭಾವಿಸಿದ್ದನು
2. ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು
3. ಸೈನಿಕರನ್ನು ಸಂಘಟಿಸಿದನು
4. ಗುಪ್ತ ಸಭೆಗಳನ್ನು ನಡೆಸಿದನು
5. ಬ್ರಿಟಿಷರ ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡಲು ಯತ್ನಿಸಿದನು.
6. ಬ್ರಿಟಿಷರು ರಾಯಣ್ಣನನ್ನು ಸೆರೆಹಿಡಿಯಲು ದೇಸಾಯಿಗಳನ್ನು ಪ್ರಚೋದಿಸಿದರು
7. ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷರು ಬಂಧಿಸಿದರು
8. ನಂದಗಡದಲ್ಲಿ ಗಲ್ಲಿಗೇರಿಸಲಾಯಿತು

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಗಿ, ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055